## ಸಮಾಜಮುಖಿ, ಪ್ರಯೋಗಶೀಲ ಅಡ್ಡೂರು ಶಿವಶಂಕರ ರಾವ್



ಕೃಷಿಕ, ಹೋರಾಟಗಾರ, ಕೃಷಿ ಸಂವಹನಕಾರ ಶಿವಶಂಕರ ರಾವ್ ಅಡ್ಡೂರು ಇನ್ನಿಲ್ಲ. ಅವರು ತಮ್ಮ ಜೀವನ ಪ್ರೀತಿ, ಶ್ರದ್ಧೆ, ಶಿಸ್ತಿನಿಂದಾಗಿ ಎಳೆಯರಿಗೆ ಮಾದರಿಯಾದವರು. ಆರಂಭದ ಒಂದೆರಡು ಕಾಮ್ ಶಿಬಿರಗಳಲ್ಲಿ ಭಾಗವಹಿಸಿ ನಮ್ಮಲ್ಲಿ ಸ್ಫೂರ್ತಿ ತುಂಬಿದ್ದರು. ಅವರ ಜೀವನ ವೃತ್ತಾಂತ 'ಎಂಭತ್ತರ ಕೊಯ್ಲಿನ ಕಾಳುಗಳು' ಕೃತಿಯಲ್ಲಿ ಶಿವಶಂಕರ ರಾವ್ ಬದುಕಿನ ಹಲವು ಮಜಲುಗಳು ವಿವರಿಸಲ್ಪಟ್ಟಿವೆ. **ನಮ್ಮನ್ನಗಲಿದ ಹಿರಿಯ ಚೇತನಕ್ಕೆ ಕಾಮ್ ಬಳಗದ ನಮನ.**

ಕಳೆದ ಫೆಬ್ರವರಿ 13ರಂದು ಅವರು ನಿಧನರಾದಾಗ ಅವರ ಮಗ ಅಭಿವೃದ್ಧಿ ಬರಹಗಾರ, ಕಾಮ್ ಸಂಪನ್ಮೂಲ ವ್ಯಕ್ತಿ ಅಡ್ಡೂರು ಕೃಷ್ಣ ರಾವ್ ಉದಯವಾಣಿಯ ಬಹುಧಾನ್ಯ ಅಂಕಣದಲ್ಲಿ ತಮ್ಮ ತಂದೆಯ ಬದುಕನ್ನು ಕಟ್ಟಿಕೊಟ್ಟದ್ದು ಹೀಗೆ.

ಮಂಗಳೂರಿನಿಂದ 20 ಕಿಮೀ ದೂರದ ಅಡ್ಡೂರಿನಲ್ಲಿ ಕೃಷಿಯನ್ನೇ ನಂಬಿ ಬದುಕಿದ್ದ ನನ್ನ ತಂದೆ ಅಡ್ಡೂರು ಶಿವಶಂಕರ ರಾಯರು ಇನ್ನಿಲ್ಲ. ತೊಂಬತ್ತೊಂದು ವರುಷಗಳ ತುಂಬು ಬದುಕು ಮುಗಿಸಿ, 19.2.2013ರಂದು ಅವರು ವಿಧಿವಶರಾದರು.

ಕೃಷಿಯನ್ನೇ ನಂಬಿ ನೆಮ್ಮದಿಯಿಂದ ಬದುಕಬಹುದೆಂದು ತೋರಿಸಿಕೊಟ್ಟವರು ಶಿವಶಂಕರ ರಾಯರು. ಆ ನೆಮ್ಮದಿಗೆ ಕಾರಣ ಅವರ ಸರಳ ಜೀವನ. ನಾನು ಕಂಡಾಗಿನಿಂದಲೂ ಅವರ ಉಡುಪು ಖಾದಿಯ ಅರೆತೋಳಿನ ಷರಟು ಮತ್ತು ಬಿಳಿ ಮುಂಡು. ಯಾವಾಗಲೂ ಹೆಗಲಿಗೊಂದು ಚೀಲ, ಕೈಯಲ್ಲೊಂದು ಕೊಡೆ. ಇದಕ್ಕಿಂತ ಹೆಚ್ಚಾಗಿ ಏನನ್ನೂ ಬಯಸಿದವರಲ್ಲ. ತನಗೊಂದು ರೇಡಿಯೋ ಸಾಕು, ಟಿವಿ ಬೇಡ ಎಂದವರು. ಇದ್ದದ್ದರಲ್ಲೇ ತೃಪ್ತಿಪಟ್ಟವರು. ಊಟಕ್ಕೆ ಅನ್ನವಾದರೆ ಅನ್ನ, ಗಂಜಿಯಾದರ ಗಂಜಿ. ತನ್ನ ಪಾಲಿನ ಜಮೀನು ಕಳಕೊಂಡರೇ ವಿನಃ ಹೊಸದಾಗಿ ಖರೀದಿಸಲಿಲ್ಲ.

ಅವರ ನೆಮ್ಮದಿಗೆ ಇನ್ನೊಂದು ಕಾರಣ, ಕೊಡುವುದರಲ್ಲಿ ಅವರು ಕಂಡುಕೊಳ್ಳುತ್ತಿದ್ದ ಸಂತೋಷ. ಕೃಷಿಕರಿಗೆ ಉಪಯುಕ್ತ ಮಾಹಿತಿ ನೀಡಲಿಕ್ಕಾಗಿ ಹಾಗೂ ವಿಚಾರ ವಿನಿಮಯಕ್ಕಾಗಿ ಕೃಷಿಕ ಮಿತ್ರರೊಂದಿಗೆ ಸೇರಿ ಅವರು ಹುಟ್ಟು ಹಾಕಿದ ವೇದಿಕೆ "ಕೃಷಿ ಅನುಭವ ಕೂಟ". 1965ರಿಂದ 1985ರ ವರೆಗೆ 20 ವರುಷಗಳ ಅವಧಿಯಲ್ಲಿ, ಈ ವೇದಿಕೆಯ ಆಶ್ರಯದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಜರಗಿಸಿ, ನೂರಾರು ಕೃಷಿಕರಿಗೆ ಅಮೂಲ್ಯ ಮಾಹಿತಿ ಹಂಚಿದರು. ದಕ್ಷಿಣ ಕನ್ನಡದ ಕೃಷಿಕರಲ್ಲಿ ಪ್ರಗತಿಪರ ಧೋರಣೆ ಬೆಳೆಸಲು ಕೃಷಿ ಅನುಭವ ಕೂಟ ನೀಡಿದ ಕೊಡುಗೆಗೆ ಬೆಲೆ ಕಟ್ಟಲಾಗದು.

ಅಡ್ಡೂರು ಶಿವಶಂಕರ ರಾಯರು ಭತ್ತದ ವಿವಿಧ ತಳಿಗಳ ಮತ್ತು ಹೊಸ ಬೆಳೆಗಳ ಬೀಜಗಳನ್ನು ನೂರಾರು ಕೃಷಿಕರಿಗೆ ಹಂಚಿದ್ದಾರೆ. ನಾಲ್ಕು ನೂರಕ್ಕೂ ಅಧಿಕ ಗಂಗಬೊಂಡ ತೆಂಗಿನ ಸಸಿಗಳನ್ನು ಅತೀ ಕಡಿಮೆ ಬೆಲೆಗೆ ಒದಗಿಸಿದ್ದಾರೆ. ಅವನ್ನು ಅವರು ಇಮ್ಮಡಿ ಬೆಲೆಗೆ ಮಾರಲು ಸಾಧ್ಯವಿತ್ತು. ಆದರೆ ಒಂದು ರೂಪಾಯಿ ಬೆಲೆ ಏರಿಸಲಿಕ್ಕೂ ಅವರು ತಯಾರಿರಲಿಲ್ಲ. ತನ್ನ ಮನೆಗೆ ಬಂದವರಿಗೆ ಅವರಂತೆ ಎಳನೀರು ಕೊಟ್ಟು ಸತ್ಕರಿಸುವ ಯಾರನ್ನೂ ನಾನು ಕಂಡಿಲ್ಲ.

ಪುಸ್ತಕಗಳ ವಿಚಾರದಲ್ಲಂತೂ ಅವರು ಕೊಡುಗೈ ದಾನಿ. ಮದುವೆಮುಂಜಿ ಇತ್ಯಾದಿ ಸಮಾರಂಭಗಳಲ್ಲಿ ಅವರು ಉಡುಗೊರೆಯಾಗಿ ಕೊಡುತ್ತಿದ್ದದ್ದು ಪುಸ್ತಕಗಳನ್ನು. ಕಾರಿನಲ್ಲಿ ಅಡ್ಡೂರಿಗೆ ಬರುತ್ತಿದ್ದ ಹಲವರು, ಇವರು ತೋರಿಸಿದ ಪುಸ್ತಕದ ಪುಟ ತಿರುಗಿಸಿ ನೋಡಿ, "ಇದನ್ನು ಓದಿ ಕೊಡುತ್ತೇನೆ" ಎಂದಾಗ, ಕೊಟ್ಟು ಬಿಡುತ್ತಿದ್ದರು ("ಇಂಥಲ್ಲಿ ಖರೀದಿಸಿ" ಎನ್ನುತ್ತಿರಲಿಲ್ಲ.) ಹಾಗೆ ಇವರು ಕಳೆದುಕೊಂಡ ಪುಸ್ತಕಗಳ ಲೆಕ್ಕ ಇಟ್ಟವರಿಲ್ಲ.

ಅಡ್ಡೂರಿಗೆ ವಿದ್ಯುತ್ ಸಂಪರ್ಕಕ್ಕಾಗಿ ಕರ್ನಾಟಕ ವಿದ್ಯುತ್ ಮಂಡಳಿಯವರಿಗೆ ಟ್ರಾನ್ಸ್ ಫಾರ್ಮರ್ ಹಾಕಲು ಸೂಕ್ತ ಜಾಗ ಬೇಕಾಗಿತ್ತು. ಆದರೆ ಜಾಗ ಒದಗಿಸಲು ಅಡ್ಡೂರಿನಲ್ಲಿ ಯಾರೂ ಮುಂದೆ ಬರಲಿಲ್ಲ. ಆ ಸಂದರ್ಭದಲ್ಲಿ "ಊರಿಗೆ ಕರೆಂಟ್ ಬರಲಿ" ಎಂಬ ಭಾವದಿಂದ, ತಮ್ಮ ಕುಟುಂಬದ ಮುಳಿಪಡ್ಪು ಎಂಬ ಜಾಗವನ್ನು ಅದಕ್ಕಾಗಿ ಒದಗಿಸಿದವರು ಶಿವಶಂಕರರಾಯರು. ಒಂದಿಂಚು ಜಾಗಕ್ಕಾಗಿ ಇಂದು ರಕ್ತಪಾತ ನಡೆಯುವುದನ್ನು ನಾವು ಕಾಣುತ್ತಿದ್ದೇವೆ. ಹಾಗಿರುವಾಗ, ಊರಿನ ರಸ್ತೆಗಾಗಿ ತನ್ನ ತೆಂಗಿನ ತೋಟದ ಎರಡೂ ಪಕ್ಕಗಳಲ್ಲಿ ಒಂದು ಎಕರೆ ಜಾಗ ಬಿಟ್ಟು ಕೊಟ್ಟ ಮಹಾನುಭಾವರು ಅವರು.

ಅಡ್ಡೂರಿನಲ್ಲಿ 1950ರ ದಶಕದ ಆರಂಭದಲ್ಲಿ ಕೃಷಿ ಕಾಯಕಕ್ಕೆ ತೊಡಗಿದವರು ಶಿವಶಂಕರ ರಾಯರು. ಆ ಸಂದರ್ಭದಲ್ಲಿ "ಒಂದು ಕಳಸೆ ಗದ್ದೆಯಲ್ಲಿ ಮೂರು ಮುಡಿ ಭತ್ತ ಬೆಳೆಯುವವನು ಐದು ಮುಡಿ ಬೆಳೆದರೆ ನೆಮ್ಮದಿಯಿಂದ ಇರಲು ಸಾಧ್ಯವಿಲ್ಲವೇ?" ಎಂಬ ವಿಚಾರ ಕೃಷಿ ಬಗ್ಗೆ ಮಾಹಿತಿ ಸಂಗ್ರಹಕ್ಕಾಗಿ ತನ್ನನ್ನು ಪ್ರೇರೇಪಿಸಿಸಿತು ಎಂದು ಅವರು ಹೇಳಿಕೊಂಡಿದ್ದಾರೆ.

ಆಗ ಅವರಿಗಿದ್ದ ಕನಸುಗಳು: ವೈಜ್ಞಾನಿಕ ಕೃಷಿಯ ಮಾಹಿತಿಗಳನ್ನು ಕೃಷಿಕರಿಗೆ ತಲಪಿಸಬೇಕು; ಕೃಷಿಕರ ಸಂಶಯಗಳನ್ನು ಕೃಷಿವಿಜ್ಞಾನಿಗಳಿಗೆ ತಿಳಿಸಿ ಪರಿಹಾರ ಕಂಡುಕೊಳ್ಳಬೇಕು; ಮೂರರಿಂದ ಐದು ಎಕರೆಯಲ್ಲಿ ಸಾಮಾನ್ಯ ಕೃಷಿಕನಾಗಿ ಒಂದು ಮಾದರಿ ಕೃಷಿಕ್ಷೇತ್ರ ನಿರ್ಮಿಸಬೇಕು.

ಈ ಎಲ್ಲ ಕನಸುಗಳನ್ನು ನನಸು ಮಾಡಿಕೊಂಡದ್ದೇ ಅವರ ಬದುಕಿನ ಸಾಧನೆ. ಈ ನಿಟ್ಟಿನಲ್ಲಿ, ಅಡ್ಡೂರಿನ ಅವರ ಕರ್ಮಭೂಮಿ "ಕೃಷ್ಣಾ ಫಾರ್ಮ್" ಹಲವಾರು ಕೃಷಿಪ್ರಯೋಗಗಳಿಗೆ ಪ್ರಯೋಗಶಾಲೆಯಾಗಿತ್ತು. ಅಲ್ಲಿ ಅವರು ಬೆಳೆಸಿ ನೋಡಿದ ಹೊಸಹೊಸ ಭತ್ತದ ತಳಿಗಳು ಹತ್ತುಹಲವು. ಇಂತಹ ಪ್ರಯೋಗಗಳ ಫಲಿತಾಂಶಗಳನ್ನು ಶ್ರದ್ಧೆಯಿಂದ ಕೃಷಿವಿಜ್ಞಾನಿಗಳಿಗೆ ತಿಳಿಸುತ್ತಿದ್ದರು. ಆ ಮೂಲಕ ಇಲ್ಲಿನ ಮಣ್ಣಿಗೆ ಸೂಕ್ತವಾದ, ಕ್ರಿಮಿಕೀಟಗಳ ನಿರೋಧಗುಣ ಹೊಂದಿದ ತಳಿಗಳ ಅಭಿವೃದ್ಧಿಗೆ ಸಹಕರಿಸುತ್ತಿದ್ದರು. ಹಾಗಂತ ಕೃಷಿವಿಜ್ಞಾನಿಗಳ ಮತ್ತು ಕೃಷಿ ಅಧಿಕಾರಿಗಳ ಶಿಫಾರಸುಗಳ ಟೊಳ್ಳುತನ ಬಹಿರಂಗ ಪಡಿಸಲು ಹಿಂಜರಿಯಲಿಲ್ಲ. ಉದಾಹರಣೆಗೆ, ಮಣ್ಣಿಗೆ ಹಾಕಬೇಕಾದ ಸುಣ್ಣದ ಪ್ರಮಾಣದ ಬಗ್ಗೆ ಶಿಫಾರಸನ್ನು ಕೃಷಿವಿಜ್ಞಾನಿಗಳೂ ಕೃಷಿಅಧಿಕಾರಿಗಳೂ ಹಲವು ಬಾರಿ ಬದಲಾಯಿಸಿದ್ದನ್ನು ಸಾರ್ವಜನಿಕ ಸಭೆಯಲ್ಲೇ ಖಂಡಿಸಿದ್ದರು.

ಕೃಷಿ ಎಂಬುದು ದುಡ್ಡು ಮಾಡುವ ದಂಧೆಯಲ್ಲ; ಅದೊಂದು ಉದಾತ್ತ ಜೀವನ ವಿಧಾನ ಎಂದು ನಂಬಿದವರು ಶಿವಶಂಕರ ರಾಯರು. ಈ ತತ್ವವನ್ನು ನಂಬಿ, ಅದರಂತೆಯೇ ತನ್ನ ಜೀವನದ ಕೊನೆಯ ಅರುವತ್ತು ವರುಷ ಬದುಕಿದವರು. ತನ್ನ ಸರಳ ಹಾಗೂ ನೆಮ್ಮದಿಯ ಬದುಕಿನ ಅನುಭವ ಮತ್ತು ಸಂದೇಶಗಳನ್ನು 'ಎಂಬತ್ತರ ಕೊಯ್ಲಿನ ಕಾಳುಗಳು' (ಪ್ರ: ಮಿತ್ರಮಾಧ್ಯಮ, ಬೆಂಗಳೂರು) ಎಂಬ ಪುಸ್ತಕದಲ್ಲಿ ಅವರು ದಾಖಲಿಸಿದ್ದಾರೆ. ಕೃಷಿಕರನ್ನು ಈಗ ಕಾಡುತ್ತಿರುವ ಹಲವು ಗೊಂದಲಗಳಿಗೆ ಶಿವಶಂಕರರಾಯರ ಬದುಕಿನ ಅನುಭವಗಳಿಂದ ಪರಿಹಾರ ಕಂಡುಕೊಳ್ಳಬಹುದು ಎನಿಸುತ್ತದೆ.


**ಈ ಸಂಚಿಕೆಯ ಪ್ರಾಯೋಜಕರು** : ಡಾ. ಗೋವಿಂದ ಪೈಲೂರು

ಮುಂದಿನ ಸಂಚಿಕೆಯ ಪ್ರಾಯೋಜಕರು: ನಾಗೇಶ ಹೆಗಡೆ, ಬೆಂಗಳೂರು

ಕಾಮ್ ಹಿತೈಷಿಗಳು ಸಂಚಿಕೆಗಳನ್ನು ಪ್ರಾಯೋಜಿಸುವಂತೆ ವಿನಂತಿ. ಒಂದು ಸಂಚಿಕೆಯ ವೆಚ್ಚ 3 ಸಾವಿರ ರೂಪಾಯಿ.

**'ಕಾಮ್ ನ್ಯೂಸ್'** ಕೃಷಿ ಮಾಧ್ಯಮ ಕೇಂದ್ರದ ಪ್ರಕಟಣೆ. ಇದು ಖಾಸಗಿ ಪ್ರಸಾರಕ್ಕಾಗಿ ಮಾತ್ರ.

ಸಂಪಾದಕಿ: ಅನಿತಾ ಪೈಲೂರು, ವಿಳಾಸ: ಕೃಷಿ ಮಾಧ್ಯಮ ಕೇಂದ್ರ, ನಂ.327, ಮೊದಲನೇ ಮಹಡಿ, ರಾಯಚೂರು ಪ್ಲಾಟ್ಸ್, ನಾರಾಯಣಪುರ, ಧಾರವಾಡ – 580008.

Email: agriculturalmedia@gmail.com ♦ Website: www.krushimadhyama.org

ವಿನ್ಯಾಸ: ಆರ್ಟೆಕ್, ಧಾರವಾಡ ♦ ಮುದ್ರಣ: ರೀಗಲ್ ಪ್ರಿಂಟ್ ಸರ್ವಿಸ್, ಬೆಂಗಳೂರು



ಕಾಮ್ ನ್ಯೂಸ್

CAM NEWS

38–39 ● ಏಪ್ರಿಲ್ 2013


## ಸಂಕಷ್ಟದಲ್ಲಿ ಕೃಷಿ

ಅಂಕಿ–ಅಂಶಗಳ ಪ್ರಕಾರ ಭಾರತದಲ್ಲಿ ಅತಿಹೆಚ್ಚು ರೈತರು ಜೀವನಕ್ಕೆ ವಿದಾಯ ಹೇಳುತ್ತಿರುವ ಐದು ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ತಪ್ಪು ಭರವಸೆಗಳನ್ನು ನಂಬಿ ಹೆಚ್ಚು ಆದಾಯದ ಬಯಕೆಯಿಂದ ಪರಿಸರಕ್ಕೆ ಪೂರಕವಲ್ಲದ ಬೆಳೆಗಳನ್ನು ಬೆಳೆದವರು ಸೋಲುತ್ತಿರುವ ನಿದರ್ಶನಗಳು ನಮ್ಮ ಮುಂದಿವೆ. ಇದಕ್ಕೆ ಕಾರಣಗಳು ಹಲವು. ಎಲ್ಲಾ ವೃತ್ತಿಯಲ್ಲೂ ತಿಂಗಳ ಕೊನೆಗೆ ಆದಾಯ ನಿಶ್ಚಿತ. ಕೃಷಿಯಲ್ಲಿ ಮಾತ್ರ ಹೀಗಿಲ್ಲ. ಇಷ್ಟು ಉತ್ಪತ್ತಿ ಇದೆ ಎಂದು ಹೇಳಬಹುದು, ಆದರೆ ಆದಾಯ ಎಷ್ಟು ಎಂದು ಹೇಳಲಾಗದು. ಬಿತ್ತನೆ ಬೀಜದ ವೈಫಲ್ಯ, ನೀರಿನ ತೊಂದರೆ, ಕಡಿಮೆಯಾಗುತ್ತಿರುವ ಮಣ್ಣಿನ ಫಲವತ್ತತೆ, ದೂರದೃಷ್ಟಿ ಇಲ್ಲದ ಬೆಳೆ ಆಯ್ಕೆ, ರಾಸಾಯನಿಕಗಳ ಮಿತಿಮೀರಿದ ಬಳಕೆ, ದಲ್ಲಾಳಿಗಳ ಮೊರೆ ಹೋಗುವ ಅನಿವಾರ್ಯತೆ ಹೀಗೆ ಹತ್ತು ಹಲವು ಕಾರಣಗಳಿಂದ ಇಂದು ಕೃಷಿ ಖುಷಿ ನೀಡುವ ವೃತ್ತಿಯಾಗಿಲ್ಲ.

ತಮ್ಮ ಆಹಾರ ಬೆಳೆದು ಇತರರಿಗೂ ಪೂರೈಸುವಷ್ಟು ಶಕ್ತವಾಗಿದ್ದ ಕೃಷಿಕ ಸಮುದಾಯ ಇಂದು ಕಳೆಗುಂದಿದೆ. ತೀರಾ ಇತ್ತೀಚಿನವರೆಗೂ ಕೃಷಿಕರು ಒಪ್ಪೊತ್ತಿನ ಊಟಕ್ಕೆ ಪರದಾಡಿದರೂ, ಗ್ರಾಹಕರ ಅಗತ್ಯಗಳೆಲ್ಲಾ ಏನೂ ತ್ರಾಸ ಇಲ್ಲದೆ ಪೂರೈಕೆಯಾಗುತ್ತಿದ್ದವು. ಆಹಾರ ಧಾನ್ಯಗಳನ್ನೇ ಹೆಚ್ಚಾಗಿ ಬೆಳೆಯುತ್ತಿದ್ದ ಉತ್ತರ ಕರ್ನಾಟಕದಲ್ಲಿ ಈಗ ವಾಣಿಜ್ಯ ಬೆಳೆಗಳ ಭರಾಟೆ. ವರ್ಷದ ಹಿಂದೆ ತೊಗರಿಯ ಬೆಲೆ ದಿಢೀರನೆ ಏರಿದಾಗ ತಟ್ಟಿದ ಬಿಸಿ ಇಂದು ಧಾನ್ಯ, ತರಕಾರಿಗಳ ಬೆಲೆಯೂ ಅದೇ ದಾರಿ ಹಿಡಿದಾಗ ಯೋಚಿಸುವಂತಾಗಿದೆ. ಕೈಯಲ್ಲಿ ಎಷ್ಟೇ ಹಣವಿದ್ದರೂ ಇಂದು ಅನ್ನದ ಬಟ್ಟಲೇ ಬರಿದಾಗುತ್ತಿದೆ. ಬೆಳೆಗಾರ–ಬಳಕೆದಾರರೀರ್ವರೂ ಸಂಕಷ್ಟದಲ್ಲಿದ್ದೇವೆ.



'ನಾವು ಹಣದ ಹಿಂದೆ ಬಿದ್ದಿಲ್ಲ. ಕೃಷಿ ವೃತ್ತಿಯಲ್ಲಿ ಸಿಗದ ಗೌರವವನ್ನು ಅರಸುತ್ತಾ ಪಟ್ಟಣಕ್ಕೆ ವಲಸೆ ಹೋಗುತ್ತಿದ್ದೇವೆ.' ಉತ್ತರ ಕನ್ನಡದ ಯುವ ಕೃಷಿಕ ಸುಧಾಕರ್ ಹೇಮಾದ್ರಿ ಮಾತಿನಲ್ಲಿ ಸದ್ಯದ ಕೃಷಿರಂಗದ ವಸ್ತುಸ್ಥಿತಿ ಸ್ಪಷ್ಟವಾಗುತ್ತದೆ. ತಮ್ಮ ಕಷ್ಟ ಮಕ್ಕಳಿಗೆ ಬೇಡ ಎಂದು ಅವರನ್ನು ಕೃಷಿಯಿಂದ ಹೊರಗಿಡುವ ಪಾಲಕರೂ ಇದ್ದಾರೆ. ಕಳಪೆ ಬೀಜಗಳು, ದುಬಾರಿ ಒಳಸುರಿಗಳು, ಅಸ್ಥಿರ ಮಾರುಕಟ್ಟೆ, ಹವಾಮಾನ ವೈಪರೀತ್ಯದ ಅನಿಶ್ಚಿತತೆಯ ಮಧ್ಯೆ ಹೊತ್ತಿನ ಊಟಕ್ಕೆ ಪರದಾಡಬೇಕಾದ ಸ್ಥಿತಿ. ಈ ಪರದಾಟ ಮುಂದುವರೆಯುವುದು ಬೇಡವೆಂಬ ಅವರ ಬಯಕೆ ಬದಲಾದ ಪರಿಸ್ಥಿತಿಗೆ ಸಹಜ ಪ್ರತಿಕ್ರಿಯೆ.

ನಾವು ತಿನ್ನುವ ಆಹಾರ ಎಷ್ಟು ಮುಖ್ಯವೋ ಅದನ್ನು ಬೆಳೆಯುವವರ ಹಿತ ಕೂಡ ಅಷ್ಟೇ ಮುಖ್ಯ ಎಂಬುದನ್ನು ಸಮಾಜದಲ್ಲಿರುವ ಎಲ್ಲರೂ ಮನಗಾಣಬೇಕು. 'ನಾವು ನಿಮ್ಮೊಡನೆ ಇದ್ದೇವೆ' ಎಂದು ಧೈರ್ಯ ತುಂಬುವ ಮೂಲಕ ರೈತರಲ್ಲಿ ಆತ್ಮವಿಶ್ವಾಸ ಮೂಡಿಸುವುದರ ಜತೆಗೆ ಅವರ ಕೃಷಿಬದುಕನ್ನು ಸದೃಢಗೊಳಿಸುವ ಹಾದಿಯಲ್ಲಿ ಮಾಧ್ಯಮಗಳ ಪಾತ್ರ ಬಹಳ ಮಹತ್ವದ್ದು. ಒಂದೆಡೆ ಸಂತೃಪ್ತ ಕೃಷಿಕರು ಭರವಸೆಯ ಬೆಳಕನ್ನು ಪಸರಿಸುತ್ತಿದ್ದರೆ, ಇನ್ನೊಂದೆಡೆ ಕತ್ತಲು ಹಾಸುಹೊಕ್ಕಿದೆ. ಹತಾಶೆ ಮತ್ತು ಸಮಾಧಾನದ ನಡುವೆ ಭರವಸೆಯ ಕೊಂಡಿ ಬೆಸೆದಾಗ ಕೃಷಿ ಆಯ್ಕೆಯ ವೃತ್ತಿಯಾದೀತು.

* * * * *

ಕಾಮ್ ತರಬೇತಿಗೆ ತಾತ್ಕಾಲಿಕ ವಿರಾಮ ನೀಡಿದರೂ, ಕಾಮ್ ಫೆಲೋಗಳ ಬರವಣಿಗೆ ಅಡೆತಡೆಯಿಲ್ಲದೆ ಸಾಗಿದೆ. ಕನ್ನಡದ ದಿನಪತ್ರಿಕೆ, ನಿಯತಕಾಲಿಕಗಳಿಗೆ ನಿಗದಿತವಾಗಿ ಬರೆಯುವುದನ್ನು ರೂಢಿಸಿಕೊಂಡಿದ್ದಾರೆ. ಹಲವು ಪತ್ರಿಕೆಗಳ ಸಂಪಾದಕರು ಅವರನ್ನು ಬರಹಗಳಿಗಾಗಿ ಸಂಪರ್ಕಿಸುತ್ತಿದ್ದಾರೆ. ಅಡಿಕೆ ಪತ್ರಿಕೆ ಹಾಗೂ ಸ್ಪೈಸ್ ಇಂಡಿಯಾ ಪತ್ರಿಕೆಗಳು ಲೇಖನಗಳನ್ನು ಅಸೈನ್ ಮಾಡುತ್ತಿವೆ. ಫೆಬ್ರವರಿ, 2013ರ 'ಸ್ಪೈಸ್ ಇಂಡಿಯಾ'ದ ಹೆಚ್ಚಿನ ಬರಹಗಳು ಕಾಮ್ ಫೆಲೋಗಳು ಬರೆದವು. ಪತ್ರಿಕೆಯ ಸಂಪಾದಕರು ಲೇಖನಗಳ ಗುಣಮಟ್ಟದ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ನಯನಾ ಆನಂದ್ ಹಾಗೂ ರೋಹಿಣಿ ಶರ್ಮ ಅವರ ಬರವಣಿಗೆಯನ್ನು ವಿಶೇಷವಾಗಿ ಉಲ್ಲೇಖಿಸಿದ್ದಾರೆ. ಎಲ್ಲರೂ ತಮ್ಮ ಆಸಕ್ತಿ ಹಾಗೂ ಪರಿಣತಿಯ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಬರವಣಿಗೆ ಮಾಡುತ್ತಿರುವುದು ಗಮನಾರ್ಹ. ಈ ಮಧ್ಯೆ ಸಹನಾ ಕಾಂತಬೈಲು ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಮಹತ್ವಾಕಾಂಕ್ಷೆಯ 'ಕನ್ನಡ ಜಾನಪದ ನಿಘಂಟು' ಯೋಜನೆಯಡಿ 'ಕ್ಷೇತ್ರತಜ್ಞ'ರೆಂದು ನಿಯೋಜಿತರಾಗಿದ್ದಾರೆ. ಮಾಲತಿ ಹೆಗಡೆ ಪ್ರಜಾವಾಣಿಯ ಹುಬ್ಬಳ್ಳಿ–ಧಾರವಾಡ ಮೆಟ್ರೊ ಪುರವಣಿಯಲ್ಲಿ ಕೈತೋಟದ ಕುರಿತು ಸರಣಿ ಬರಹ ಬರೆಯಲಾರಂಭಿಸಿದ್ದಾರೆ. ಎಲ್ಲರಿಗೂ ಅಭಿನಂದನೆಗಳು.

ಕೇಂದ್ರದ 12ನೇ ವಾರ್ಷಿಕೋತ್ಸವ ಧಾರವಾಡ ಸಮೀಪದ 'ಸುಮನ ಸಂಗಮ'ದಲ್ಲಿ ಅಕ್ಟೋಬರ್ 30, 2012ರಂದು ಸರಳವಾಗಿ ನೆರವೇರಿತು. ಗ್ರಾಮೀಣಾಭಿವೃದ್ಧಿ ತಜ್ಞ ಡಾ. ಪ್ರಕಾಶ ಭಟ್, ವೈದ್ಯ–ಪರಿಸರ ತಜ್ಞ ಡಾ. ಸಂಜೀವ ಕುಲಕರ್ಣಿ, ಧ್ವನಿ ಸಂಸ್ಥೆಯ ನಿರ್ದೇಶಕ ಶಿವಾನಂದ ಹೊಂಬಳ್ ಅವರು ಅತಿಥಿಗಳಾಗಿ ಭಾಗವಹಿಸಿದ್ದರು. ಸಮಾರಂಭದ ಮೊದಲು ಧಾರವಾಡ–ಬೆಳಗಾವಿ ಜಿಲ್ಲೆಗಳ ಕಾಮ್ ಫೆಲೋಗಳು ಬರಹಗಾರರಾಗಿ ತಮ್ಮ ಮುಂದಿನ ಹೆಜ್ಜೆ ಹಾಗೂ ಕಾಮ್ ಚಟುವಟಿಕೆಗಳಿಗೆ ತಾವು ಹೇಗೆ ಕೈಜೋಡಿಸಬಲ್ಲೆವು ಎಂದು ಚರ್ಚಿಸಿದರು. ಕೃಷಿ ಇಲಾಖೆಯ ಅಧಿಕಾರಿಗಳು ತಮ್ಮಲ್ಲಿ ಬರವಣಿಗೆ ತರಬೇತಿ ಶಿಬಿರಗಳನ್ನು ಆಯೋಜಿಸುವ ಉತ್ಸಾಹ ತೋರಿದರೆ ಕೆಲವರು ಪ್ರಾದೇಶಿಕ ಸಮಸ್ಯೆಗಳನ್ನಾಧರಿಸಿ ಅಧ್ಯಯನ ಮಾಡುವುದು ಅವಶ್ಯ ಎಂದು ಅಭಿಪ್ರಾಯಪಟ್ಟರು. ಕಾಮ್ ಹಿತೈಷಿ, ಗದಗದಲ್ಲಿರುವ ಸಾವಯವ ಕೃಷಿಕ ಆರ್.ಎಸ್. ಪಾಟೀಲ್ ತಮ್ಮ ಪ್ರದೇಶದಲ್ಲಿ ಕೇಂದ್ರ ಕಾರ್ಯಕ್ರಮ ಹಮ್ಮಿಕೊಂಡರೆ ಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದರು. ಈ ಚರ್ಚೆಯಲ್ಲಿ ಕಾಮ್ ಫೆಲೋಗಳಿಗೆ ಪುನರ್ಮನನ ಶಿಬಿರ ಮಾಡುವ ಕುರಿತೂ ಚರ್ಚಿಸಲಾಗಿತ್ತು. ಆ ಪ್ರಕಾರ ಬೆಂಗಳೂರಿನ ಹೆಬ್ಬಾಳದಲ್ಲಿರುವ ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ಜನವರಿ 13, 2013 ರಂದು ಶಿಬಿರ ಆಯೋಜಿಸಲಾಗಿತ್ತು. ಎರಡೂ ಕಾರ್ಯಕ್ರಮಗಳ ವರದಿ ಒಳಪುಟಗಳಲ್ಲಿದೆ.

– **ಅನಿತಾ ಪೈಲೂರು**

## ಸಂವೇದನಾಶೀಲ ಸಮಾಜ ಇಂದಿನ ಅಗತ್ಯ

'ನಾವೀಗ ರೈತರ ಆತ್ಮಹತ್ಯೆ, ಹಳ್ಳಿಯಿಂದ ನಗರಕ್ಕೆ ವಲಸೆ, ವಿದೇಶಿ ಖಾಸಗಿ ಕಂಪನಿಗಳ ಹಾವಳಿ ಹಾಗೂ ಭೂಮಿ ಬಿಸಿಯಾಗುವಂತಹ ನಾಲ್ಕು ಮಹಾ ವಿಪ್ಲವಗಳನ್ನು ಎದುರಿಸುತ್ತಿದ್ದು, ಇವುಗಳ ಪರಿಣಾಮವನ್ನು ಸಮಗ್ರವಾಗಿ ಅರಿತು ವಿಶ್ಲೇಷಿಸಬಲ್ಲ ಸಂವೇದನಾಶೀಲ ಬರಹಗಾರರು ಹಾಗೂ ಮಾಧ್ಯಮ ನೀಡುವ ಮಾಹಿತಿಗೆ ಸೂಕ್ತವಾಗಿ ಸ್ಪಂದಿಸುವ ಸಮಾಜ ಇಂದಿನ ಅಗತ್ಯ' ಎಂದು ಹಿರಿಯ ಪತ್ರಕರ್ತ ನಾಗೇಶ ಹೆಗಡೆ ಸದ್ಯದ ವಸ್ತುಸ್ಥಿತಿಯನ್ನು ವಿಶ್ಲೇಷಿಸಿದರು.



ಅವರು 13.1.2013ರಂದು ಬೆಂಗಳೂರಿನ ಹೆಬ್ಬಾಳದಲ್ಲಿರುವ ಪಶುವೈದ್ಯಕೀಯ ಮಹಾವಿದ್ಯಾಲಯದ ಸಭಾಂಗಣದಲ್ಲಿ ಕೃಷಿ ಮಾಧ್ಯಮ ಕೇಂದ್ರ ಆಯೋಜಿಸಿದ್ದ 'ಸುಸ್ಥಿರ ಕೃಷಿಗೆ ಹತ್ತಾರು ಹಾದಿ' ಹಾಗೂ 'ಡೇರಿ ಡಾಕ್ಟರ್, ಹೋರಿ ಮಾಸ್ಟರ್' ಪುಸ್ತಕಗಳ ಬಿಡುಗಡೆ ಸಮಾರಂಭದಲ್ಲಿ ಮಾತನಾಡುತ್ತಿದ್ದರು.

'ವಿಪ್ಲವಗಳ ದುಷ್ಪರಿಣಾಮವನ್ನು ಸಮರ್ಥವಾಗಿ ಎದುರಿಸಲು ಕೃಷಿಕರು, ಮಾಧ್ಯಮ, ಶೈಕ್ಷಣಿಕ ವಲಯದ ತಜ್ಞರು ಹಾಗೂ ಸಮಾಜ ಪರಸ್ಪರ ಪೂರಕವಾಗಿ ಕೆಲಸ ಮಾಡಬೇಕಾಗಿದೆ' ಎಂದು ಅವರು ಅಭಿಪ್ರಾಯ ಪಟ್ಟರು.

ಸಾವಯವ ಕೃಷಿಕ ಬೆಂಗಳಿ ವೆಂಕಟೇಶ ಮಾತನಾಡಿ 'ಕೃಷಿಯಿಂದ ಸಿಗುವ ನೆಮ್ಮದಿ ಬೇರೆ ಯಾವ ವೃತ್ತಿಯಲ್ಲೂ ದೊರೆಯಲಾರದು. ವ್ಯವಸಾಯವೆಂದರೆ ಕಷ್ಟ ಎನ್ನುತ್ತಾರೆ. ಸರಿಯಾದ ಯೋಜನೆ ಹಾಗೂ ಕಠಿಣ ಪರಿಶ್ರಮದಿಂದ ಇದನ್ನೂ ಲಾಭದಾಯಕ ವೃತ್ತಿಯನ್ನಾಗಿಸಬಹುದು' ಎಂದು ಹೇಳಿದರು. ಬೆಂಗಳಿ ವೆಂಕಟೇಶ ಅವರು ಕೈಗೊಂಡ ಸಾವಯವ ಕೃಷಿಯ ಬಗ್ಗೆ ಬೆಳಕು ಚೆಲ್ಲುವ, ಕೃಷಿ ಮಾಧ್ಯಮ ಕೇಂದ್ರದ 18ನೇ ಪ್ರಕಟಣೆ 'ಸುಸ್ಥಿರ ಕೃಷಿಗೆ ಹತ್ತಾರು ಹಾದಿ' ಹೊತ್ತಿಗೆಯನ್ನು ಪಶುವೈದ್ಯಕೀಯ ಕಾಲೇಜಿನ ಡೀನ್ ಡಾ. ಎಸ್. ಯತಿರಾಜ್ ಬಿಡುಗಡೆಗೊಳಿಸಿ ಮಾತನಾಡುತ್ತಾ 'ಕೇವಲ ಒಂದೂಮುಕ್ಕಾಲು ಎಕರೆ ಭೂಮಿಯಲ್ಲಿ ರಾಸಾಯನಿಕ ರಹಿತ ಕೃಷಿ ಕೈಗೊಂಡು ನೆಮ್ಮದಿಯ ಜೀವನ ನಡೆಸುತ್ತಿರುವುದು ನಿಜಕ್ಕೂ ಅತ್ಯುತ್ತಮ ಸಾಧನೆ' ಎಂದರು.

ಅಭಿವೃದ್ಧಿ ಪತ್ರಕರ್ತ ಶ್ರೀ ಪಡ್ರೆ 'ಡೇರಿ ಡಾಕ್ಟರ್, ಹೋರಿ ಮಾಸ್ಟರ್' ಪುಸ್ತಕ ಬಿಡುಗಡೆ ಮಾಡಿ 'ಪಶುವೈದ್ಯಕೀಯ ವೃತ್ತಿಯನ್ನು ವಿಭಿನ್ನವಾಗಿ ಚಿತ್ರಿಸಿದ ಈ ಪುಸ್ತಕ ಪಶುವೈದ್ಯ ಲೋಕದ ಪೇಚು, ಹಾಸ್ಯಮಯ, ಹಾಸ್ಯಾಸ್ಪದ ಘಟನೆಗಳನ್ನು ಓದುಗರಿಗೆ ಮುದನೀಡುವ ಶೈಲಿಯಲ್ಲಿ ನಿರೂಪಿಸಲಾಗಿದೆ' ಎಂದು ಹೇಳಿದರು. ಭೂಮಿ ಬುಕ್ಸ್ ಪ್ರಕಟಿಸಿರುವ ಈ ಪುಸ್ತಕ ಇಂಗ್ಲೆಂಡ್‌ನ ಪಶುವೈದ್ಯ ಜೇಮ್ಸ್ ಹೆರಿಯಟ್ ಅತ್ಮ ಕಥೆಯ ವಿವಿಧ ಪ್ರಸಂಗಗಳ ಕನ್ನಡ ರೂಪಾಂತರ.

ಎರಡೂ ಪುಸ್ತಕಗಳ ಲೇಖಕ, ಕಾಮ್ ಫೆಲೋ ಡಾ. ಗಣೇಶ ಎಂ. ನೀಲೇಸರ ಪುಸ್ತಕಗಳ ವಸ್ತು, ಬರವಣಿಗೆಯ ಕುರಿತು ತಮ್ಮ ಅನುಭವ ಹಂಚಿಕೊಂಡರು. ಕೃಷಿ ಮಾಧ್ಯಮ ಕೇಂದ್ರದ ಅಧ್ಯಕ್ಷೆ ಅನಿತಾ ಪೈಲೂರು ಪ್ರಸ್ತಾವನಾ ಭಾಷಣ ಮಾಡಿ ಸಣ್ಣ ಹಿಡುವಳಿಯಲ್ಲಿ ಸ್ವಾವಲಂಬನೆಯನ್ನು ಸಾಧಿಸಿರುವ ಕೃಷಿಕರ ಅನುಭವಗಳನ್ನು ದಾಖಲಿಸುವ ಕೇಂದ್ರದ ಪುಸ್ತಕ ಸರಣಿಗೆ ಉತ್ತಮ ಪ್ರತಿಕ್ರಿಯೆ ದೊರೆತಿದೆ ಎಂದರು.

ಇದಕ್ಕೂ ಮುನ್ನ ಕೃಷಿ ಮಾಧ್ಯಮ ಕೇಂದ್ರದಿಂದ ಕೃಷಿ ಹಾಗೂ ಗ್ರಾಮೀಣ ಪತ್ರಿಕೋದ್ಯಮ ತರಬೇತಿ ಪಡೆದ ಕಾಮ್ ಫೆಲೋಗಳಿಗೆ ಒಂದು ದಿನದ ಪುನರ್ಮನನ ಶಿಬಿರ ಆಯೋಜಿಸಲಾಗಿತ್ತು. ನಾಡಿನ ಹೆಸರಾಂತ ಅಭಿವೃದ್ಧಿ ಬರಹಗಾರರಾದ ನಾಗೇಶ ಹೆಗಡೆ, ಶ್ರೀ ಪಡ್ರೆ, ಹೆಚ್.ಎನ್. ಆನಂದ, ಗಾಣಧಾಳು ಶ್ರೀಕಂತ, ಮಲ್ಲಿಕಾರ್ಜುನ ಹೊಸಪಾಳ್ಯ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು.

* * * * *

## ಅಭಿವೃದ್ಧಿಯ ಪ್ರಕ್ರಿಯೆಯ ದಾಖಲಾತಿ ಬಹುಮುಖ್ಯ

'ಅಂತಿಮ ಫಲಿತಾಂಶ ಒಂದೇ ಅಭಿವೃದ್ಧಿಯ ಮಾನದಂಡವಾಗಿರಬಾರದು, ಅಭಿವೃದ್ಧಿಯ ಪ್ರಕ್ರಿಯೆ ಬಹುಮುಖ್ಯ ಎಂಬುದನ್ನು ನಾವೆಲ್ಲರೂ ಅರಿಯಬೇಕಾಗಿದೆ.' ಎಂದು ಸುಸ್ಥಿರ ಅಭಿವೃದ್ಧಿ ತಜ್ಞ ಡಾ. ಪ್ರಕಾಶ್ ಭಟ್ ಅಭಿಪ್ರಾಯಪಟ್ಟರು. ಅವರು ಅಕ್ಟೋಬರ್ 28ರಂದು ಧಾರವಾಡ ಸಮೀಪದ 'ಸುಮನ ಸಂಗಮ' ಕಾಡುತೋಟದಲ್ಲಿ ಜರುಗಿದ ಕೃಷಿ ಮಾಧ್ಯಮ ಕೇಂದ್ರದ 12ನೇ ವಾರ್ಷಿಕೋತ್ಸವದಲ್ಲಿ ಮಾತನಾಡುತ್ತಿದ್ದರು. 'ಕೃಷಿ ಇಂದು ಅತ್ಯಂತ ಅಪಾಯಕಾರಿ ಘಟ್ಟದಲ್ಲಿ ನಿಂತಿದೆ. ಕೃಷಿಕರ ಬಿಕ್ಕಳಿಕೆಯನ್ನು ಬರಹಗಾರರು ಮನಗಂಡರೆ ಮಾತ್ರ ಸತ್ವಯುತ ಬರವಣಿಗೆ ಸಾಧ್ಯ. ಆದ್ದರಿಂದ ಕೃಷಿಯ ವಿಧಾನಗಳಿಗೆ ನೀಡುವ ಪ್ರಾಮುಖ್ಯವನ್ನೇ, ಕೃಷಿಕರ ಅನುಭವಗಳಿಗೂ ನೀಡಿ' ಎಂದು ಅವರು ಹೇಳಿದರು. ಕೃಷಿಕರ ಎಲ್ಲಾ ಅವಶ್ಯಕತೆಗಳನ್ನು ಪೂರೈಸುವ, ಪರಿಸರಕ್ಕೆ ಪೂರಕವಾದ ಕೃಷಿಯ ಅನುಭವಗಳನ್ನು ಬರಹದ ಮೂಲಕ ಪ್ರಸ್ತುತಪಡಿಸುವಂತೆಯೇ ಅವರ ಕಷ್ಟದ, ಕಣ್ಣೀರಿನ ಕಥೆಗಳನ್ನು ಓದುಗರ ಎದುರಿಗಿಡುವ ಜವಾಬ್ದಾರಿಯೂ ಬರಹಗಾರರಿಗಿದೆ. ಈ ಕಾರ್ಯಕ್ಕೆ ಅತ್ಯಂತ ಎಚ್ಚರದ ಮನಸ್ಥಿತಿ ಅಗತ್ಯ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ 2011–12ನೇ ಸಾಲಿನ ಕೃಷಿ–ಗ್ರಾಮೀಣ ಪತ್ರಿಕೋದ್ಯಮ ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿದ ಹದಿನಾರು ಅಭ್ಯರ್ಥಿಗಳಿಗೆ 'ಕಾಮ್ ಫೆಲೋ' ಪ್ರಮಾಣಪತ್ರ ನೀಡಲಾಯಿತು. ನಂತರ ಮಾತನಾಡಿದ ಡಾ. ಸಂಜೀವ ಕುಲಕರ್ಣಿ ಕೇಂದ್ರದ ಪ್ರಾಯೋಗಿಕ ತರಬೇತಿಗಳಿಂದ ಕೃಷಿ ಪತ್ರಿಕೋದ್ಯಮಕ್ಕೆ ಮತ್ತಷ್ಟು ಬಲ ಬಂದಿದೆ ಎಂದು ಅಭಿಪ್ರಾಯ ಪಟ್ಟರು. ಇಂತಹ ತರಬೇತಿಗಳು ಬರವಣಿಗೆಯ ಜೊತೆಗೆ ವ್ಯಕ್ತಿತ್ವವನ್ನೂ ರೂಪಿಸುತ್ತದೆ ಎಂದು ಹೇಳಿದರು.



2011–12ರ ಅವಧಿಯಲ್ಲಿ ಅಡಿಕೆ ಪತ್ರಿಕೆಯಲ್ಲಿ ಪ್ರಕಟಗೊಂಡ ಕಾಮ್ ಬಳಗದ(ಅಭ್ಯರ್ಥಿಗಳು ಮತ್ತು ಫೆಲೋಗಳು) ಆರು ಅತ್ಯುತ್ತಮ ಲೇಖನಗಳಿಗೆ ಬಹುಮಾನ ನೀಡಲಾಯಿತು.

| | | |
|---|---|---|
| 1. | ಹಳ್ಳಿಪ್ರೀತಿಯ 'ಹಲ ಬಗೆ ವೇಷ' | ಶಶಿಧರ್ ಸಕ್ಕರೆಮಕ್ಕಿ |
| 2. | ತಿನ್ನಲು ಸಿದ್ಧ ಸಿರಿಧಾನ್ಯ | ಲೀಲಾ ಕೌಜಗೇರಿ |
| 3. | ಹಲಸಲ್ಲೇ ಬದುಕು ಕಟ್ಟಿದ ಹೈದರಾಬಾದಿಗ | ಪ್ರಕಾಶ್ ಭಟ್ ಕರ್ಕಿ |
| 4. | ಸೂಜಿ ಸೇರಿದ ತುತ್ತು, ಹಸುವಿಗೆ ಆಪತ್ತು | ಡಾ. ತಿಮ್ಮಪ್ಪ ಜೆ.ಆರ್. |
| 5. | ತೆಂಗು ಕೊಯ್ಲು ಮೂರೇ ಕ್ಲಿಕ್ ದೂರ | ರವಿಶಂಕರ ದೊಡ್ಡಮಾಣಿ |
| 6. | ಕ್ಲಿಕ್ ಆದ ಕ್ಲಿಂಗ್‌ಪ್ಯಾಕ್ | ಜಿ. ಗಣಪತಿ ಭಟ್ |



ಫೆಲೋ ಕಾಲಂ



## ಕೃಷಿಪತ್ರಿಕೋದ್ಯಮದ ಟಿಸಿಲುಗಳು

– ಮಾಲತಿ ಹೆಗಡೆ

2010ರ ಬೇಸಿಗೆ ರಜೆಯಲ್ಲಿ ತವರಿಗೆ ಹೋಗಿದ್ದಾಗ ಅಕ್ಕನೊಂದಿಗೆ ಹರಟೆಯ ಮಧ್ಯೆ ಕಾಮ್ ತರಬೇತಿಗೆ ಸೇರುವ ಆಲೋಚನೆಯನ್ನು ಅರುಹಿದೆ. ನಾಲ್ಕು ವರ್ಷದ ಹಿಂದೆ ತರಬೇತಿ ಪಡೆದ ಅವಳು ತಕ್ಷಣ ಸ್ಪಂದಿಸಿ ಅಗತ್ಯ ಮಾಹಿತಿಯನ್ನೂ ನೀಡಿದಳು. ನಾನು ತರಬೇತಿಗೆ ಸೇರಿದೆ.

ಮೂರು ದಿನದ ಉಪಯುಕ್ತ ತರಬೇತಿಯ ನಂತರ ಅಸೈನ್‌ಮೆಂಟ್‌ಗೆ ವಸ್ತು ಹೊಳೆದಾಗ ಅನಿತಾಗೆ ಹೇಳಿ ಗ್ರೀನ್ ಸಿಗ್ನಲ್ ದೊರೆತ ಮೇಲೆ ಕ್ಷೇತ್ರಭೇಟಿಗೆ ಹೊರಡುತ್ತಿದ್ದೆ. ಮೂರನೆಯ ಲೇಖನ ಕೈತೋಟದ ಕುರಿತಾಗಿತ್ತು. ಆಪ್ತ ವಿಷಯವೇ ಆದುದರಿಂದ ಬರವಣಿಗೆ ಕಷ್ಟ ಎನಿಸಲಿಲ್ಲ. ಮುಂದೆ ತಾರಸಿ ತೋಟ, ಮೌಲ್ಯವರ್ಧನೆ ಕುರಿತಾದ ಲೇಖನಗಳು ಬರೆಯಲು ಸುಲಭ ಎನ್ನಿಸಿದವು. ಲೇಖನಗಳಲ್ಲಿ ವೈವಿಧ್ಯತೆ ಇರಬೇಕು ಎಂದು ಜೇನು ಕೃಷಿ, ಸಮಗ್ರ ಕೃಷಿ, ಕಿರುಧಾನ್ಯಗಳ ಕುರಿತಾಗಿ ಬರೆಯಲು ಹಳ್ಳಿಗಳನ್ನು ಸುತ್ತಿದೆ. ಅನೇಕ ತಜ್ಞರನ್ನು ಭೇಟಿಯಾದೆ. ಅಗತ್ಯವೆನಿಸಿದಾಗ ಸಂಪನ್ಮೂಲ ವ್ಯಕ್ತಿಗಳ ಬಳಿ ಮಾಹಿತಿ–ಸಲಹೆ ಕೇಳುತ್ತಿದ್ದೆ. ಜೊತೆಯ ಅಭ್ಯಾಸಿ ರಾಜೇಶ್ವರಿಯೊಡನೆ ವಿವಿಧ ವಿಷಯಗಳ ಕುರಿತು ಗಂಟೆಗಳ ಕಾಲ ಚರ್ಚಿಸಿದ್ದೇನೆ. ಲೇಖನಗಳು ಪ್ರಕಟವಾದಾಗ ಸಂತೋಷಿಸಿ, ಪತ್ರಿಕೆಯವರು ಕತ್ತರಿ ಪ್ರಯೋಗ ಮಾಡಿದಾಗ ಪೇಚಾಡಿಕೊಂಡು, ದುಡ್ಡು ಕೊಡದಿದ್ದಾಗ ತತ್ವಜ್ಞಾನವನ್ನು ಹೇಳಿಕೊಂಡು ನಕ್ಕಿದ್ದೇವೆ. ಅನುಕೂಲವಾದಾಗ ಒಟ್ಟೊಟ್ಟಿಗೆ ಹಳ್ಳಿಗಳನ್ನು ತಿರುಗಿ, ರೈತರು ಹಾಗೂ ಮಹಿಳೆಯರ ಕಷ್ಟ ಕಂಡು ಉಂಟಾದ ಮಾನಸಿಕ ತಲ್ಲಣಗಳನ್ನು ಹಂಚಿಕೊಂಡಿದ್ದೇವೆ. ಮೊದಲಿನ ಲೇಖನ ಕೈ ಬರಹದಲ್ಲಿ ಬರೆದು ಪತ್ರಿಕೆಯ ಕಛೇರಿಯಲ್ಲಿ ಕಳೆದ ಮೇಲೆ ಪ್ರಕಟಣೆಯ ಗೊಡವೆಯೇ ಬೇಡ ಎಂದು ಕೊಂಡವಳಿಗೆ ಮಕ್ಕಳು ನುಡಿಯಲ್ಲಿ ಬರೆಯುವುದನ್ನು ಕಲಿಸಿದರು. ಅಸೈನ್‌ಮೆಂಟ್ ತಿದ್ದುಪಡಿಯೊಂದಿಗೆ ಬರುತ್ತಿದ್ದವು. ತಿದ್ದುಪಡಿಗಳನ್ನು ಅಳವಡಿಸಿ ಲೇಖನವನ್ನು ಪರಿಷ್ಕರಿಸಿ ಪತ್ರಿಕೆಗೆ ಕಳಿಸುವ ಮುನ್ನ ಜೀವನ ಸಂಗಾತಿಗೆ ಒಮ್ಮೆ ಓದಲು ಆಗ್ರಹಿಸುತ್ತಿದ್ದೆ. ಉಪಯುಕ್ತ ಸಲಹೆಗಳೊಂದಿಗೆ ತಿದ್ದುತ್ತಿದ್ದರು. ಈ ಮೇಲ್ ಮಾಡುತ್ತಿದ್ದರು.

ಪ್ರಜಾವಾಣಿಯಲ್ಲಿ ಪ್ರಕಟವಾದ ಮೊದಲಿನ ಲೇಖನ 'ಅಂಗಳದಲ್ಲಿ ತಿಂಗಳ ತರಕಾರಿ'ಗೆ ಒಳ್ಳೆಯ ಪ್ರತಿಕ್ರಿಯೆ. 'ಟಿವಿ9' ಚಾನಲ್ ನವರು ಈ ಕೈತೋಟದ ಕುರಿತು ಕಾರ್ಯಕ್ರಮ ಮಾಡಿ ಪ್ರಸಾರ ಮಾಡಿದರು. ಪುಟ್ಟ ಮನೆಯಲ್ಲಿ ಹೋಳಿಗೆ, ರೊಟ್ಟಿ ತಯಾರಿಸಿ ಮಾರಿ ಜೀವನ ನಡೆಸುವ ಶಾಂತಕ್ಕ, 'ನೀವು ನಮ್ಮ ಮನಿಗೆ ದೇವರಾಗಿ ಬಂದ್ರೀ ನೀವು ಬರೆದ ಲೇಖನದಿಂದ ನಮಗೆ ಅನೇಕ ಗಿರಾಕಿಗಳು ಸಿಕ್ಕಿದರು, ಆಕಾಶವಾಣಿಯವರು ಸಂದರ್ಶನ ಮಾಡಿದರು' ಎಂದು ಬರವಣಿಗೆಯ ಸಾರ್ಥಕತೆಯನ್ನು ಹುಟ್ಟಿಸಿದರು. ಪತ್ರಿಕಾರಂಗ ಗುರುತಿಸದ ಹದಿನಾಲ್ಕು ಸಾಧಕರನ್ನು ಸಮಾಜಕ್ಕೆ ಪರಿಚಯಿಸಿದ ಸಂತೋಷ ನನಗಿದೆ. ನನ್ನ ಲೇಖನಗಳನ್ನು ಓದಿ ಅದೇ ಸಾಧಕರ ಬಗ್ಗೆ ಬೇರೆಯವರು ಲೇಖನಗಳನ್ನು ಬರೆದಿದ್ದಾರೆ! ಲೇಖನಕ್ಕೆ ವಸ್ತುವಾದವರು, ಲೇಖನವನ್ನು ಮೆಚ್ಚಿಕೊಂಡವರು, ಚೆನ್ನಾಗಿ ಬರೀತಿಯಮ್ಮಾ ಎಂದು ಆಶೀರ್ವದಿಸಿದ ಹಿರಿಯರು, ನನ್ನೊಂದಿಗೆ ತರಬೇತಿ ಮುಗಿಸಿದ ರೋಹಿಣಿ ಅಕ್ಕ, ನಯನಾ, ಕೋಮಲಾ... ಹೀಗೆ ನನ್ನ ಬಳಗವೂ ದೊಡ್ಡದಾಗಿದೆ. ನನ್ನ ಬರಹಗಳಿಂದ ನನ್ನನ್ನು ಅನೇಕರು ಗುರುತಿಸುತ್ತಿದ್ದಾರೆ.

ಅಳ್ನಾವರ ಜೇನು ಕೃಷಿ ಕೇಂದ್ರಕ್ಕೆ ಹೋಗಿ ಒಂದು ದಿನವಿಡೀ ಮಾಹಿತಿ ಸಂಗ್ರಹಿಸಿ ಇನ್ನೇನು ಹೊರಡಬೇಕು ಎಂದುಕೊಂಡಾಗ, 'ನೋಡಿ ಅನೇಕರು ಇಲ್ಲಿಯ ವಿಷಯ ಬೇರೇ ಬೇರೆ ಪತ್ರಿಕೆಯಲ್ಲಿ ಬರೆದಿದ್ದಾರೆ' ಎಂದು ಆರು ಲೇಖನಗಳನ್ನು ತಂದುಕೊಟ್ಟರು. ನನಗೆ ಅವರು ಬರೆಯದ ಮಗ್ಗುಲನ್ನು ಹುಡುಕುವುದೇ ದೊಡ್ಡ ಸವಾಲಾಯಿತು. ಕಬ್ಬೂರ ಎನ್ನುವವರು ಉತ್ತಮ ತಾರಸಿ ತೋಟ ಮಾಡಿದ್ದಾರೆ ಒಂಬ ಸುಳಿವು ಹಿಡಿದು ಹೋದರೆ ನೂರು ಶಬ್ದವನ್ನೂ ಬರೆಯಲಾದ ಪರಿಸ್ಥಿತಿ ಅಲ್ಲಿತ್ತು. ಆದರೆ ಅವರು ಶಿಕ್ಷಕರಿಗಾಗಿ ಉಪಯುಕ್ತ ತರಬೇತಿಯನ್ನು ನೀಡುತ್ತಿದ್ದರು. ಆ ಮಾಹಿತಿಗಳನ್ನೇ ಸಂಗ್ರಹಿಸಿ 'ಗ್ರಹಿಕೆಯನ್ನು ಹೆಚ್ಚಿಸುವ ಕಲಿಕೆಯ ತಾಣ' ಎಂಬ ಶಿಕ್ಷಣಕ್ಕೆ ಸಂಬಂಧಿಸಿದ ಲೇಖನವನ್ನೇ ಬರೆದೆ. ತಿಂಗಳ ಹಿಂದೆ ಅಲೆಮಾರಿ ಕುರುಬ ಮಹಿಳೆ ಮಡ್ಡೆವ್ವನನ್ನು ಮಾತನಾಡಿಸಲು ಹೋಗಿದ್ದೆ. ಅನಕ್ಷರಸ್ಥ ಮಹಿಳೆ. ತಿರುಗಾಟದ ಬದುಕೇ ಧರ್ಮ ಎಂದುಕೊಂಡವಳು. ನಾನು ಕೇಳಿದ ಪ್ರಶ್ನೆಗಳನ್ನೆಲ್ಲ ನನಗೇ ತಿರುಗಿಸಿ ಕೇಳಿದಳು. ವಾರಕ್ಕೆರಡು ದಿನಾ ಅದ್ರೂ ಜಳಕಾ ಮಾಡಬೇಕು. ಹೆಣ್ಣು ಗಂಡು ಅಂತ ನಾಲ್ಕಾದ್ರು ಮಕ್ಕಳನ್ನು ಹಡಿಬೇಕು, ಮನೆತನಾ ನಡಸಬೇಕು ಎಂದು ನನಗೆ ಹಿತವಚನವನ್ನು ಹೇಳಿದಳು! ಸಂದರ್ಶನದಲ್ಲಿ ನಾನು ಕೇಳಿದನ್ನು ಬರೆದುಕೊಂಡೆ ಅವಳು ಹೇಳಿದಳು ಅಷ್ಟೆ ವ್ಯತ್ಯಾಸ. ಆದರೆ 'ಕುಡಿಯಲು ಯೋಗ್ಯ ನೀರು ಸಿಗದಿರುವ ಅವರ ಬದುಕಿನ ಬವಣೆ' ಕೇಳಿದಾಗ ಲೇಖನಗಳನ್ನು ಬರೆದರೆ ಸಾಕೇ? ಎಂಬ ಸಂಕಟ ಮನಸ್ಸನ್ನು ಬಹಳ ದಿನ ಕಾಡಿತು. ಬರವಣಿಗೆಯ ಹಾದಿಯಲ್ಲಿ ದಕ್ಕಿದ ಅನುಭವಗಳು ಬದುಕನ್ನು ಪಕ್ವಗೊಳಿಸಿವೆ.

ಸಮಾನ ಮನಸ್ಕರನ್ನು ಸೇರಿಸಿ ಅನ್ಯನ್ಯವಾದ ಕನಸಿನೊಂದಿಗೆ ಹುಟ್ಟಿದ ಕೃಷಿ ಮಾಧ್ಯಮ ಕೇಂದ್ರವೆಂಬ ಮೊಳಕೆ ಇಂದು ವೃಕ್ಷವಾಗುವತ್ತ ಮುನ್ನಡೆದಿದೆ. ಅದರ ಕೊಂಬೆಗಳಾಗುವಲ್ಲಿ ಮಾರ್ಗದರ್ಶನ ನೀಡಿದ ಎಲ್ಲಾ ಸಂಪನ್ಮೂಲ ವ್ಯಕ್ತಿಗಳಿಗೂ ಧನ್ಯವಾದಗಳು.

– ಮಾಲತಿ ಹೆಗಡೆ
'ಬದುಕು', 196 ಮೊದಲನೇ ಅಡ್ಡರಸ್ತೆ
ಹೊಯ್ಸಳ ನಗರ, ಹಳಿಯಾಳ ರಸ್ತೆ, ಧಾರವಾಡ

* * * * *

ಕಾರ್ಯಕ್ರಮಕ್ಕೂ ಮೊದಲು ನಡೆದ ಸಂವಾದದಲ್ಲಿ ನೂತನ ಕಾಮ್ ಫೆಲೋಗಳು; ಹಿರಿಯ ಕಾಮ್ ಫೆಲೋಗಳಾದ ಶೈಲಜಾ ಬೆಳ್ಳಂಕಿಮಠ, ಆರ್.ಬಿ. ಹಿರೇಮಠ, ಹರ್ಷವರ್ಧನ ಶೀಲವಂತ, ಹಾಗೂ ಲೀಲಾ ಕೌಜಗೇರಿ; ಕಾಮ್ ಸಂಪನ್ಮೂಲ ವ್ಯಕ್ತಿಗಳು ಹಾಗೂ ಹಿತೈಷಿಗಳು ಪಾಲ್ಗೊಂಡಿದ್ದರು.

ಆತ್ಮದೀಪ ಪರಿಸರ ಹಾಗೂ ಆರೋಗ್ಯ ಸಂಘಟನೆಯ ಆಶ್ರಯದಲ್ಲಿ ಹಮ್ಮಿಕೊಳ್ಳಲಾದ ಈ ಕಾರ್ಯಕ್ರಮದಲ್ಲಿ ಗದಗದ ಹಿರಿಯ ಸಾವಯವ ಕೃಷಿಕ ಆರ್.ಎಸ್. ಪಾಟೀಲ್, ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ನಿರ್ದೇಶಕ ಶಿವಾನಂದ ಹೊಂಬಳ್, ಸುವಿದ್ಯಾ ಸಂಸ್ಥೆಯ ಡಾ. ಎಸ್.ಎಸ್. ಗಣನಾಥ್, ಕಾಮ್ ಸಂಪನ್ಮೂಲ ವ್ಯಕ್ತಿಗಳಾದ ಪೂರ್ಣಪ್ರಜ್ಞ ಬೇಳೂರು ಹಾಗೂ ಆನಂದ ತೀರ್ಥ ಪ್ಯಾಟಿ, ಪತ್ರಿಕಾ ಮಿತ್ರರು ಹಾಗೂ ಕೇಂದ್ರದ ಹಿತೈಷಿಗಳು ಭಾಗವಹಿಸಿದ್ದರು.



* * * * *

# ಕಾಮ್ ಫೆಲೋಗಳ ಪ್ರಕಟಿತ ಲೇಖನಗಳ ವಿವರ

**ಸಹನಾ ಕಾಂತಬೈಲು ಅವರ –**
**ಹಸಿರು ತೋಟ ನಡುವೆ ಪಾಠ**
(ಪ್ರಜಾವಾಣಿ, 07.8.2012)

**ಗುಂಡು ಮೆಣಸು**
(ವಿಜಯವಾಣಿ, 13.8.2012)

**ಮ್ಯಾಂಗೋಸ್ಟೀನ್ ಸವಿ**
(ಪ್ರಜಾವಾಣಿ, 21.8.2012)

**ಬಣ್ಣದ ಬಸವನಹುಳು**
(ಸುಧಾ, 30.8.2012)

**ಬಾಕ್ಸಲ್ಲಿ ತುಂಬಿ ಬಾಸುಮತಿ ಸೊಪ್ಪು**
(ವಿಜಯವಾಣಿ, 3.9.2012)

**ಕಾನಕಲ್ಲಟೆ – ಬಳುಕುವ ಬಳ್ಳಿ ತರಕಾರಿ**
(ಕನ್ನಡಪ್ರಭ, 10.9.2012)

**ಕರಾವಳಿ ಜನರ ಮಳೆಗಾಲದ ಕಸುಬು**
(ವಿಜಯವಾಣಿ, 17.9.2012)

**ಆರೋಗ್ಯಕ್ಕೆ ಗರಿಕೆ**
(ಉದಯವಾಣಿ, 28.8.2012)

**ಅರೆಯುವ ಕಲ್ಲಿನ ಬದಲಿ ಬಳಕೆ**
(ನಿರಂತರ ಪ್ರಗತಿ, ಸೆಪ್ಟೆಂಬರ್ 2012)

**ಇಳೆಯ ಸ್ವರ್ಗ ಉಂಬಳೆ**
(ವಿಜಯ ಕರ್ನಾಟಕ, 24.11.2012)

**ಬಾಳೆಗೆಣಸು: ಆರೋಗ್ಯದ ಉಣಿಸು**
(ವಿಜಯವಾಣಿ, 26.11.2012)

**ಮಾವಿನ ಶುಂಠಿ**
(ವಿಜಯವಾಣಿ, 10.12.2012)

**ಅಡಿಕೆ – ಪಪಾಯ ತರುವುದು ಆದಾಯ**
(ಪ್ರಜಾವಾಣಿ, 11.12.2012)

**ಜಾಜಿ ಮಲ್ಲಿಗೆ**
(ಸುಧಾ, 20.12.2012)

**ಕೊಡಗಿನ ಕನಸಿನ ಮನೆ**
(ಪ್ರಜಾವಾಣಿ, 19.12.2012)

**ಹಲಸಿನಕಾಯಿ ದೋಸೆ**
(ಪ್ರಜಾವಾಣಿ, 14.1.2013)

**ಮರೆಯಾಗುತ್ತಿದೆ ಮಣ್ಣಡಿಕೆ**
(ಸುಧಾ, 31.1.2013)

**ಸಿಂಗ ಬಾಳೆ ಎಂಬ ಸಿಹಿ ಬಾಳೆ**
(ವಿಜಯವಾಣಿ, 4.3.2013)

**ಮಾಲತಿ ಹೆಗಡೆ ಅವರ –**
**ಚಿತ್ತಾಕರ್ಷಕ ದಾಸವಾಳ**
(ಸಂಯುಕ್ತ ಕರ್ನಾಟಕ, 05.09.2012)

**ಸಾವಿಲ್ಲದ ಸಾವಿ ಸೋಲಿಲ್ಲದ ರೈತ**
(ಸಂಯುಕ್ತ ಕರ್ನಾಟಕ, 12.09.2012)

**ಪರಿಸರ ಪ್ರೇಮಿ ವಿನಾಯಕ**
(ಸಂಯುಕ್ತ ಕರ್ನಾಟಕ, 19.9.2012)

**ಕಟ್ಟಿದಾಗ ಗೂಡು ಕರಗಿದಾಗ ಮೇಣ**
(ಪ್ರಜಾವಾಣಿ, 25.09.2012)

**ಸಿರಿಧಾನ್ಯ ಮೌಲ್ಯವರ್ಧನೆಗೆ ಬರಹಗಾರರ ಸಾಥ್**
(ಪ್ರಜಾವಾಣಿ, 01.09.2012)

**ಹಸಿರು ಉದ್ಯಮಕ್ಕೆ ಹೊಸ ಭಾಷ್ಯ**
(ಪ್ರಜಾವಾಣಿ, 08.09.2012)

**ಶಿಕ್ಷಣ ಹೀಗೂ ಉಂಟು ದಾರಿ**
(ಪ್ರಜಾವಾಣಿ, 24.09.2012)

**ದೊಡ್ಡಮೆಣಸಿಗೆ ಸಣ್ಣ ಮೆಣಸಿನ ಸವಾಲು**
(ವಿಜಯವಾಣಿ, 10.09.2012)

**ಗುಳೆ ಹೋಗದೇ ಗಟ್ಟಿ ಬದುಕು ಕಟ್ಟಿಕೊಂಡವರು**
(ವಿಜಯವಾಣಿ, 17.09.2012)

**ಬದುಕು ಕೊಟ್ಟ ಕೊಟ್ಟಿಗೆ**
(ವಿಜಯವಾಣಿ, 01.10.2012)

**ಕಷ್ಟಕ್ಕಾದ ಕಾಳುಮೆಣಸು**
(ಸ್ಪೈಸ್ ಇಂಡಿಯಾ, ಜನವರಿ 2013)

**ಡಾ. ಗಣೇಶ ಎಂ. ನೀಲೇಸರ ಅವರ–**
**ಬರಕ್ಕೆ ಬೆದರಿ ಜಾನುವಾರು ಮಾರದಿರಿ**
(ವಿಜಯವಾಣಿ, 8.10.2012)

**ಹೈನುಗಾರಿಕೆ**
(ಸಂಯುಕ್ತ ಕರ್ನಾಟಕ, 31.10.2012)

**ಅರ್ಧ ಗುಂಟೆಯಲ್ಲಿ ಸಮಗ್ರ ಕೃಷಿ**
(ಸಿರಿಸಮೃದ್ಧಿ, ನವಂಬರ್ 2012)

**ಶಿಲೀಂಧ್ರ ಸೌಂದರ್ಯ**
(ಅಡಿಕೆ ಪತ್ರಿಕೆ, ಜನವರಿ 2013)

**ರಾಸುಗಳಲ್ಲಿ ಕಂದು ರೋಗ**
(ಪ್ರಜಾವಾಣಿ, 22.1.2013)

**ನೀಡಿ ಕಡಿಮೆ ಹಿಂಡಿ, ಹೆಚ್ಚು ಹಾಲು ಹಿಂಡಿ**
(ವಿಜಯವಾಣಿ, 18.2.2013)

**ಗಬ್ಬದ ರಾಸು ಸರಿಯಾಗಿ ಸಾಕದಿದ್ದರೆ ಲಾಸು**
(ವಿಜಯವಾಣಿ, 4.2.2013)

**ಹಾಲಿನ ಡಿಗ್ರಿ ಹೆಚ್ಚಿಸಿ**
(ಪ್ರಜಾವಾಣಿ, 19.2.2013)

**ಮಿಶ್ರ ಕೃಷಿಯಲ್ಲಿ ಸುಸ್ಥಿರತೆಗೆ ಪೂರಕವಾದ ಕಾಳು ಮೆಣಸು**
(ಸ್ಪೈಸ್ ಇಂಡಿಯಾ, ಫೆಬ್ರವರಿ 2012)

**ಪೂರ್ಣಿಮಾ ಕಾನಹಳ್ಳಿ ಅವರ–**
**ಕಾಫಿ ಬೆಳೆಗೆ ಸ್ಲರಿ ಪ್ರಯೋಗ**
(ವಿಜಯವಾಣಿ, 18.2.2013)

**ರೈತರ ಬದುಕಿಗೆ ಭಾರವಾದ ಆಲಿಕಲ್ಲು**
(ಪ್ರಜಾವಾಣಿ, 19.2.2013)

**ಹುಳಿ–ಸಿಹಿ ಕಾಡುಹಣ್ಣು ಜೀರ್ಕ**
(ಸ್ಪೈಸ್ ಇಂಡಿಯಾ, ಅಕ್ಟೋಬರ್ 2012)

**ವರಿ ಇಳಿಸಿದ ಸ್ಲರಿ**
(ಸ್ಪೈಸ್ ಇಂಡಿಯಾ, ಜನವರಿ 2013)

**ನಯನಾ ಆನಂದ್ ಅವರ–**
**ಸ್ವಯಂ ನಿವೃತ್ತಿ ಕೃಷಿಯಲ್ಲಿ ಬಡ್ತಿ**
(ಪ್ರಜಾವಾಣಿ, 29.1.2013)

**ಕಲ್ಪತರು ನಾಡಿನಲ್ಲಿ 'ತೆಂತಾ' ಕಂಪು**
(ಪ್ರಜಾವಾಣಿ, 11.12.2012)

**ಕಲ್ಪತರು ನಾಡಿನಲ್ಲಿ ಜಾಯಿಕಾಯಿ ಘಮಲು**
(ಸ್ಪೈಸ್ ಇಂಡಿಯಾ, ಫೆಬ್ರವರಿ 2012)

**ಸುರೇಶ ಧಾರವಾಡಕರ ಅವರ–**
**ಟ್ರೈಕೋ ಕಾರ್ಡ್ ವೇ**
(ಉದಯವಾಣಿ, 4.2.2013)

**ದೇಸಿ ಮಸೂರಿ**
(ಉದಯವಾಣಿ, 21.1.2013)

**ಸೌರಶಕ್ತಿ ಚಾಲಿತ ಔಷಧ ಸಿಂಪಡಣೆಯ ಯಂತ್ರ**
(ವಿಜಯವಾಣಿ, 14.1.2013)

**ಎನ್.ಎಂ. ನಟರಾಜ ಅವರ–**
**ಕೊಳವೆಬಾವಿಗೂ ಸ್ಕ್ಯಾನಿಂಗ್**
(ಪ್ರಜಾವಾಣಿ, 8.1.2013)

**ಮಗ್ಗದ 'ಅಚ್ಚು' ಕೆಚ್ಚುವ ಯಂತ್ರ**
(ಪ್ರಜಾವಾಣಿ, 20.3.2013)

**ಗಣಪತಿ ಭಟ್ ಹಾರೋಹಳ್ಳಿ ಅವರ–**
**ಕ್ಲಿಕ್ ಆದ ಕ್ಲಿಂಗ್ ಪ್ಯಾಕ್**
(ಅಡಿಕೆ ಪತ್ರಿಕೆ, ಸೆಪ್ಟೆಂಬರ್ 2012)

**ಬಾನಿನ ಜೀವಜಲ**
(ಅಡಿಕೆ ಪತ್ರಿಕೆ, ನವೆಂಬರ್ 2012)

**ಶಶಿಧರ್ ಸಕ್ಕರೆಮಕ್ಕಿ ಅವರ–**
**ಕೃಷಿಯ ಜೊತೆ ಕರಕುಶಲತೆ**
(ಅಡಿಕೆ ಪತ್ರಿಕೆ, ಅಕ್ಟೋಬರ್ 2012)

**'ಹೊರಗುತ್ತಿಗೆ'ಯ ಬಲದಿಂದ ಬೆಳೆದ ಉದ್ದಿಮೆ**
(ಅಡಿಕೆ ಪತ್ರಿಕೆ, ನವೆಂಬರ್ 2012)

**ಹೊಸ ಭರವಸೆ ಮೂಡಿಸಿದ ಕೆಂಪಕ್ಕಿ ಮೇಳ**
– ನಾಗರಾಜ ಮತ್ತಿಗಾರ
(ವಿಜಯವಾಣಿ, 4.3.2013)

**ಕಸುಬಿನ ಜೊತೆಗೊಂದು ಉಪಕಸುಬು**
– ವಿನೋದ್ ರಾ. ಪಾಟೀಲ
(ವಿಜಯವಾಣಿ, 25.2.2013)

**ನವಣೆಯಿಂದ ಮನ್ನಣೆ**
– ಡಾ. ನಾಗರಾಜ ಕೆ.ಎಂ.
(ವಿಜಯವಾಣಿ, 18.2.2013)

**ಬಾಳು ಬೆಳಗಿದ ಕೊಡಗಿನ ಬಾಳೆ**
– ಸಿ.ಎಸ್. ಸುರೇಶ್
(ಪ್ರಜಾವಾಣಿ, 29.1.2013)

**ಅಂದು ಬಣಬಣ ಇಂದು ಮನೋಲ್ಲಾಸ ತಾಣ**
– ಸಿದ್ಧಲಿಂಗಪ್ಪ ಬೀಳಗಿ
(ಪ್ರಜಾವಾಣಿ, 15.1.2013)

**ನಿರ್ವಹಣೆ ಹಗುರಾಗಿಸಿದ ಹೈನು ಕೃಷಿಕ**
– ಡಾ. ಮಂಜುನಾಥ ಎಲ್.
(ಅಡಿಕೆ ಪತ್ರಿಕೆ, ಅಕ್ಟೋಬರ್ 2012)

**ಜಾನುವಾರು ವಿಮೆ**
– ಡಾ. ತಿಮ್ಮಪ್ಪ ಜೆ.ಆರ್.
(ಅಡಿಕೆ ಪತ್ರಿಕೆ, ನವೆಂಬರ್ 2012)

**ತೋಟದೊಳಗೆ ಟಿಲ್ಲರ್ ಗಾಡಿ**
– ರವಿಶಂಕರ ದೊಡ್ಡಮಾಣಿ
(ಅಡಿಕೆ ಪತ್ರಿಕೆ, ನವೆಂಬರ್ 2012)

**ಮುಳ್ಳಿಲ್ಲದ ಹಾಲುವಾಣ, ಕಾಳುಮೆಣಸಿನ ತಾಣ**
– ರೋಹಿಣಿ ಶರ್ಮ
(ಸ್ಪೈಸ್ ಇಂಡಿಯಾ, ಫೆಬ್ರವರಿ 2012)

ಕಾಮ್ ಫೆಲೋ ಬಿ.ಎಂ. ಪ್ರತಿಭಾ 'ಪಾಪ್ಯುಲೇಶನ್ ಫಸ್ಟ್' ಸಂಸ್ಥೆ ನೀಡುವ ರಾಷ್ಟ್ರಮಟ್ಟದ ಲಾಡ್ಲೀ ಮಾಧ್ಯಮ ಪ್ರಶಸ್ತಿ ಪಡೆದಿದ್ದಾರೆ. ಭದ್ರಾವತಿಯ ರೈತ ಮಹಿಳೆ ಮೀನಾಕ್ಷಮ್ಮನವರ ಬಗ್ಗೆ ಅಡಿಕೆ ಪತ್ರಿಕೆಯಲ್ಲಿ ಬರೆದ 'ಸೋಲಿಗೆ ತಲೆಬಾಗದ ಶ್ರಮ ಜೀವಿ' ಲೇಖನಕ್ಕೆ ಈ ಗೌರವ ಸಂದಿದೆ. ಅವರಿಗೆ ಅಭಿನಂದನೆಗಳು.



# 2012ರ ಕಾಮ್ ಫೆಲೋಗಳ ಅನಿಸಿಕೆಗಳು

ನನಗೆ ಬರವಣಿಗೆಯಲ್ಲಿ ಆಸಕ್ತಿ. ಬರೆಯೋಣವೆಂದರೆ ಹೇಗೆಂದು ತಿಳಿದಿರಲಿಲ್ಲ. ನನ್ನ ಕೌಟುಂಬಿಕ ಜವಾಬ್ದಾರಿಯ ನಡುವೆ ಕಾಲೇಜಿನ ಪಠ್ಯಗಳನ್ನು ಅಧ್ಯಯನ ಮಾಡಿ, ಪರೀಕ್ಷೆ ಎದುರಿಸಿ 'ಬರೆಯೋದನ್ನು ಕಲಿಯೋ'ದೂ ಸಹ ಅಸಾಧ್ಯದ ಮಾತು. ಹಳ್ಳಿಯಲ್ಲಿದ್ದುಕೊಂಡೇ, ದೈನಂದಿನ ಕೆಲಸದ ನಡುವೆಯೇ ಕೃಷಿ ಪತ್ರಿಕೋದ್ಯಮದಲ್ಲಿ ನನ್ನನ್ನು ತೊಡಗಿಸಿಕೊಳ್ಳುವ ಹೊಸ ಸಾಧ್ಯತೆಯನ್ನು ತೋರಿದ್ದೇ ಕಾಮ್.

– ನಯನಾ ಆನಂದ್, ಗುಬ್ಬಿ

ವಸ್ತುನಿಷ್ಠ ಬರಹ ರೂಢಿಸಿಕೊಳ್ಳುತ್ತಿದ್ದೇನೆ. ಮೊದಲು ಐಡಿಯಲಿಸ್ಟಿಕ್ ಆಗಿದ್ದೆ. ಬರಹದಲ್ಲೂ ಅದೇ ಛಾಪು. ಕಾಮ್ ಸಂಪರ್ಕದಿಂದ ಪ್ರಾಕ್ಟಿಕಲ್ ಆಗಿದ್ದೇನೆ. ಅದರ ಪರಿಣಾಮ ಬರವಣಿಗೆ ಮೇಲೂ ಆಗಿದೆ. ಕ್ರಮಿಸಬೇಕಾದ ಹಾದಿ ದೀರ್ಘವಾಗಿದೆ. ಉತ್ತಮ ಆರಂಭ ಸಿಕ್ಕಿದುದರಿಂದ ಗುರಿ ತಲುಪುವ ವಿಶ್ವಾಸವಿದೆ. ತರಬೇತಿಯೊಂದಿಗೆ ನೀಡಿದ ಪಠ್ಯವನ್ನು ನಾನು ಕೃಷಿ–ಗ್ರಾಮೀಣ ಪತ್ರಿಕೋದ್ಯಮದ 'ಬೈಬಲ್' ಎಂದೇ ಭಾವಿಸಿದ್ದೇನೆ.

– ಡಾ. ನಾಗರಾಜ ಕೆ.ಎಂ., ಶಿವಮೊಗ್ಗ

ಕೃಷಿ ಬರವಣಿಗೆಯಲ್ಲಿ ತೊಡಗಿದುದರಿಂದ ಹೆಚ್ಚು ಹೆಚ್ಚು ಕೃಷಿಕರ ಪರಿಚಯ ಆಗಿದೆ. ಕೃಷಿಕರ ಸಮಸ್ಯೆ ಬಗ್ಗೆ ಆಳವಾದ ಚಿಂತನೆಗೆ ತೊಡಗಲು ಪ್ರೇರಣೆ ನೀಡಿದೆ. ಇನ್ನಷ್ಟು ಬರೆಯಲು ಪ್ರೇರಣೆ ನೀಡಿದೆ. ತರಬೇತಿಯ ಅವಧಿ ಇನ್ನಷ್ಟು ದೀರ್ಘವಾಗಿರಬಾರದಿತ್ತೇ ಎಂದೂ ಅನಿಸಿದೆ.

– ಎಸ್. ರೋಹಿಣಿ ಶರ್ಮ, ಸಾಗರ

ಬರವಣಿಗೆ ಕುರಿತು ಹೊಸದೇನನ್ನಾದರೂ ಕಲಿಯಬೇಕೆನ್ನುವ ನಿರೀಕ್ಷೆ ಇತ್ತು. ಈ ತರಬೇತಿಯಿಂದ ನಾನು ಬಹಳಷ್ಟು ವಿಷಯಗಳನ್ನು ಕಲಿತೆ. ಗಾಜನೂರಿನ ಪುನರ್ಮನನ ಕಾರ್ಯಾಗಾರವೂ ಬರವಣಿಗೆಯಲ್ಲಿ ಇನ್ನಷ್ಟು ಹುಮ್ಮಸ್ಸಿನಿಂದ ತೊಡಗಿಸಿಕೊಳ್ಳಲು ಸಹಕಾರಿಯಾಯಿತು. ಒಟ್ಟಾರೆಯಾಗಿ ಹೇಳಬೇಕೆಂದರೆ ಈ ತರಬೇತಿಯಿಂದಾಗಿ ಸಮಾನ ಮನಸ್ಕರ ಸಾಂಗತ್ಯ ಸಿಕ್ಕಿದೆ.

– ಸಿದ್ಧಲಿಂಗಪ್ಪ ಬೀಳಗಿ, ಹುನಗುಂದ

ನಮಗೆ ನೀಡಿರುವ ಪಠ್ಯ ಸವಿವರವಾಗಿತ್ತು. 'ಕೃಷಿಯಲ್ಲಿ ಬದುಕು ಕಟ್ಟಿಕೊಂಡ ಸಹೋದರರು' ಲೇಖನ ಪ್ರಕಟವಾದಾಗ ರಾಜ್ಯದ ಬೇರೆ ಬೇರೆ ಭಾಗಗಳಿಂದ ರೈತರು ಹಾಗೂ ಕೃಷಿಯ ಬಗ್ಗೆ ಒಳ್ಳೆಯ ಅಭಿಪ್ರಾಯ ವ್ಯಕ್ತಪಡಿಸಿ ದೂರವಾಣಿ ಕರೆಗಳು ಬಂದವು.

– ದೇವರಾಜ ನಾಯ್ಕ, ಹಳಿಯಾಳ

ಕಾಮ್ ಫೆಲೋ ಪಾಲಚಂದ್ರ–ಸ್ನೇಹಾ ವೈವಾಹಿಕ ಜೀವನಕ್ಕೆ ಕಾಲಿಟ್ಟಿದ್ದಾರೆ. ಅವರಿಗೆ ಶುಭ ಹಾರೈಕೆಗಳು.

ಸರಕಾರ ಪ್ರಥಮ ಬಾರಿಗೆ ಪ್ರಾರಂಭಿಸಿದ, ಸರಕಾರಿ ಸೇವೆಯಲ್ಲಿ ಜನೋಪಯೋಗಿಯಾಗಿ ಉತ್ತಮ ಸಾಧನೆ ಮಾಡಿದವರಿಗೆ ನೀಡಲ್ಪಡುವ 'ಸರ್ವೋತ್ತಮ ಸೇವಾ ಪ್ರಶಸ್ತಿ' ಜಿಲ್ಲಾ ಮಟ್ಟದಲ್ಲಿ ಡಾ. ಗಣೇಶ ಎಂ. ನೀಲೇಸರ ಅವರಿಗೆ ದೊರೆತಿದೆ. ಅವರಿಗೆ ಅಭಿನಂದನೆಗಳು.

# ಕೃಷಿ ಮಾಧ್ಯಮ ಕೇಂದ್ರದ ಪ್ರಕಟಣೆಗಳು

**ಸಾವಯವ ತಾರಸಿ ತೋಟ**
ಲೇ: ಅನುಸೂಯ ಶರ್ಮ
ಬೆಲೆ: ರೂ.30 (ಪ್ರತಿಗಳು ಮುಗಿದಿವೆ.)

**ಜಲನೆಮ್ಮದಿಯತ್ತ ಕಾಕೋಳ – ತೆರೆದಬಾವಿ ಮರುಪೂರಣದ ಯಶೋಗಾಥೆ**
ಲೇ: ಪೂರ್ಣಪ್ರಜ್ಞ ಬೇಳೂರು
ಬೆಲೆ: ರೂ.40

**ಗುಡ್ಡದ ಮೇಲಿನ ಏಕವ್ಯಕ್ತಿ ಸೈನ್ಯ!**
ಲೇ: ಶ್ರೀ ಪಡ್ರೆ
ಬೆಲೆ: ರೂ.15

**ಕಲ್ಲು ಹಾಸಿನ ಮೇಲೆ ಹಸಿರು ಹೊದಿಕೆ**
ಲೇ: ಆನಂದತೀರ್ಥ ಪ್ಯಾಟಿ
ಬೆಲೆ: ರೂ.15

**ಊಟ ಭರ್ಜರಿ, ಆದರೆ ಹೊಟ್ಟೆ ಖಾಲಿ!**
ಲೇ: ಶಿವರಾಂ ಪೈಲೂರು
ಬೆಲೆ: ರೂ.50

**ಹನಿಗೂಡಿ ಹಳ್ಳ**
ಅಡಿಕೆ ಪತ್ರಿಕೆಯಲ್ಲಿ ಪ್ರಕಟಗೊಂಡ ಉಪಯುಕ್ತ ಮಾಹಿತಿ ತುಣುಕುಗಳ ಸಂಗ್ರಹ
ಬೆಲೆ: ರೂ.30

**ಸಾವಯವದ ಹಾದಿ**
ಲೇ: ಈರಯ್ಯ ಕಿಲ್ಲೇದಾರ
ಬೆಲೆ: ರೂ.20

**ಮಿಶ್ರಕೃಷಿ–ಮೌಲ್ಯವರ್ಧನೆ–ನೇರ ಮಾರುಕಟ್ಟೆ: ಎಸ್.ಎಂ. ಪಾಟೀಲರ ಮಾದರಿ**
ಲೇ: ಲೀಲಾ ನಾ. ಕೌಜಗೇರಿ
ಬೆಲೆ: ರೂ.20

**ಸುಸ್ಥಿರ ಕೃಷಿ–ಸ್ವಾವಲಂಬಿ ಬದುಕು: ಕರೇಗೌಡ ದಂಪತಿ ಸಾಧನೆ**
ಲೇ: ಪೂರ್ಣಿಮಾ ತೀರ್ಥಮಲ್ಲೇಶ್
ಬೆಲೆ: ರೂ.20

**ಗಿಡಗೆಳೆತನದಿಂದ ಕೃಷಿಪ್ರೀತಿ ಬೆಳೆಸುವ ಎಡ್ವರ್ಡ್ ರೆಬೆಲ್ಲೋ**
ಲೇ: ನಾ. ಕಾರಂತ ಪೆರಾಜೆ
ಬೆಲೆ: ರೂ.20

**ಬೀಜಸ್ವಾತಂತ್ರ್ಯದ ಕಲ್ಪನೆಯನ್ನು ಸಾಕಾರಗೊಳಿಸಿದ ಭತ್ತದ ಬೋರೇಗೌಡರು**
ಲೇ: ಸೀಮಾ ಜಿ. ಪ್ರಸಾದ್
ಬೆಲೆ: ರೂ.20

**ಹೈನುಗಾರಿಕೆಯಿಂದ ಸ್ವಾವಲಂಬಿ ಬದುಕು**
ಲೇ: ಕಿಶನ್‌ರಾವ್ ಕುಲಕರ್ಣಿ
ಬೆಲೆ: ರೂ.20

**ಬರವನ್ನೇ ಮಣಿಸಿದ ಮಲ್ಲಣ್ಣ**
ಲೇ: ಶ್ರೀ ಪಡ್ರೆ
ಬೆಲೆ: ರೂ.25

**ಬರಸಹಿಷ್ಣು ಹಾರಕಕ್ಕೆ ಮರುಜೀವ**
ಲೇ: ಮಲ್ಲಿಕಾರ್ಜುನ ಹೊಸಪಾಳ್ಯ
ಬೆಲೆ: ರೂ.25

## ಕಾಮ್ ಫೆಲೋಗಳಲ್ಲಿ ವಿನಂತಿ

- ಕನಿಷ್ಠ ತಿಂಗಳಿಗೆ ಒಂದಾದರೂ ಲೇಖನ ಬರೆಯಿರಿ.
- ನಿಮ್ಮ ಪ್ರಕಟಿತ ಲೇಖನಗಳ ವಿವರಗಳನ್ನು (ಶೀರ್ಷಿಕೆ, ಪ್ರಕಟಗೊಂಡ ಪತ್ರಿಕೆ, ದಿನಾಂಕ) ತಿಂಗಳಿಗೊಮ್ಮೆ ನಮಗೆ ಈಮೇಲ್ ಅಥವಾ ಪತ್ರಮುಖೇನ ಕಳುಹಿಸಿಕೊಡಿ. ಕಾಮ್ ಫೆಲೋ ಸಹನಾ ಕಾಂತಬೈಲು ಅವರು ಕಳೆದ ಒಂದು ವರ್ಷದಿಂದ ಪ್ರತಿ ತಿಂಗಳೂ ಪ್ರಕಟಿತ ಲೇಖನಗಳ ಪಟ್ಟಿಯನ್ನು ಅಂಚೆ ಕಾರ್ಡ್ ಮೂಲಕ ತಪ್ಪದೇ ಕಳುಹಿಸುತ್ತಿದ್ದಾರೆ. ರೋಹಿಣಿ ಶರ್ಮಾ ಅವರೂ ಈ ಮಾದರಿ ಅನುಸರಿಸುತ್ತಿದ್ದಾರೆ. ಎಲ್ಲರೂ ಹೀಗೆ ಅಂಚೆ ಕಾರ್ಡ್ ಅಥವಾ ಈ ಮೇಲ್ ನಲ್ಲಿ ತಮ್ಮ ತಿಂಗಳ ಪ್ರಗತಿ/ಅನುಭವವನ್ನು ಹಂಚಿಕೊಂಡರೆ ಅದನ್ನು ಕಾಮ್ ಬಳಗದ ಜೊತೆ ಹಂಚಿಕೊಳ್ಳಬಹುದು. ಕೇಂದ್ರದ ಗೂಗಲ್ ಗ್ರೂಪ್ ಮೂಲಕವೂ ಮಾಹಿತಿ ವಿನಿಮಯ ಮಾಡಿಕೊಳ್ಳಿ.
- ನಿಮಗೆ ಸಮೀಪವಿರುವ ಕಾಮ್ ಫೆಲೋಗಳೊಂದಿಗೆ ಸಂಪರ್ಕವಿಟ್ಟುಕೊಂಡು ವಿಚಾರ ವಿನಿಮಯ ಮಾಡಿಕೊಳ್ಳಿ.
- ಕೇಂದ್ರದ ಪ್ರಕಟಣೆಗಳ ಮಾರಾಟದಲ್ಲಿ ಕೈಜೋಡಿಸಿ. ಉಡುಗೊರೆ ನೀಡುವ ಸಂದರ್ಭದಲ್ಲಿ ಕಾಮ್ ಪುಸ್ತಕಗಳನ್ನೇ ಬಳಸಿ.
- ಉದ್ಯೋಗ, ವಿಳಾಸದಲ್ಲಿ ಬದಲಾವಣೆಯಾದಾಗ ಪತ್ರ ಅಥವಾ ಈಮೇಲ್ ಮೂಲಕ ತಿಳಿಸಿ.

## ಪುಸ್ತಕ ಪರಿಚಯ



### ಸುಸ್ಥಿರ ಕೃಷಿಗೆ ಹತ್ತಾರು ಹಾದಿ
ಲೇ: ಡಾ. ಗಣೇಶ ಎಂ. ನೀಲೇಸರ
ಬೆಲೆ: ರೂ. 30 (ಅಂಚೆ ವೆಚ್ಚ ಪ್ರತ್ಯೇಕ)

ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲೂಕಿನ ಬೆಂಗಳಿ ವೆಂಕಟೇಶ ತಮಗಿರುವ ಒಂದೂ ಮುಕ್ಕಾಲು ಎಕರೆ ಹಿಡುವಳಿಯಲ್ಲಿ ಮಲೆನಾಡಿನ ಸಾಂಪ್ರದಾಯಿಕ ಅಡಿಕೆ ಕೃಷಿಯ ಜೊತೆಗೆ ಮಿಶ್ರಕೃಷಿಯನ್ನೂ ಶ್ರದ್ಧೆಯಿಂದ ಮಾಡಿ ಯಶಸ್ವಿಯಾದವರು. ಸೀಮಿತ ಸ್ಥಳಾವಕಾಶ ಹಾಗೂ ಲಭ್ಯ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡಿರುವ ಅವರು ವೈವಿಧ್ಯಮಯ ಬೆಳೆಗಳನ್ನು ಬೆಳೆದು ಏಕಬೆಳೆಯ ಅನಿಶ್ಚಿತತೆಯಿಂದ ಹೊರಬಂದವರು. ಮುಖ್ಯಬೆಳೆ ಅಡಿಕೆಗೆ ನೀಡಿದ ಮಹತ್ವವನ್ನೇ ಉಳಿದ ಬೆಳೆಗಳಿಗೂ ನೀಡಿದ್ದಾರೆ. ತೋಟದ ತುಂಬಾ ಹಬ್ಬಿರುವ ಶುಂಠಿ, ಅರಿಶಿನ, ಕಾಳುಮೆಣಸುಗಳಿಂದ ಹಿಡಿದು ತೋಟಗಾರಿಕಾ ಬೆಳೆಗಳಾದ ಚಿಕ್ಕು, ಹಲಸು, ಪುನರ್ಪುಳಿಗಳ ಮೌಲ್ಯವರ್ಧನೆ, ಮಾರಾಟ ಅವರ ಕ್ರಿಯಾಶೀಲತೆಯನ್ನು ಎತ್ತಿ ತೋರಿಸುತ್ತದೆ. ಅವರಲ್ಲಿರುವ ತೆಂಗು ಉತ್ತಮ ಗುಣಮಟ್ಟದ್ದೆಂದು ಬೇಡಿಕೆ ಹೆಚ್ಚಿದಾಗ ಪ್ರಾರಂಭಿಸಿದ ತೆಂಗಿನ ಗಿಡಗಳ ನರ್ಸರಿ ಮಾರುಕಟ್ಟೆ ಗುರುತಿಸುವ ಅವರ ಕೌಶಲದ ಜೊತೆಗೆ ಒಳಿತನ್ನು ಇತರರಿಗೆ ದಾಟಿಸುವ ಆಶಯವನ್ನೂ ತಿಳಿಸುತ್ತದೆ. ಯಾರೂ ಬೆಳೆಸಲು ಬಯಸದ, ಆದರೆ ಉತ್ತಮ ಬೇಡಿಕೆಯಿರುವ ಮಾಡಹಾಗಲವನ್ನು ಬೆಳೆಸಿದ್ದಾರೆ. ಆ ಮೂಲಕ ನಶಿಸಿಹೋಗುತ್ತಿದ್ದ ಒಂದು ತಳಿಗೆ ಹೊಸಹುಟ್ಟು ನೀಡಿದ್ದಷ್ಟೇ ಅಲ್ಲದೆ, ಕೃಷಿಪೂರಕ ಚಟುವಟಿಕೆಗಳ ಕುರಿತು ಹೊಸ ಚಿಂತನೆಗೆ ನಾಂದಿಹಾಡಿದ್ದಾರೆ. ತಮ್ಮಲ್ಲಿರುವ ಪ್ರತಿಯೊಂದು ಬೆಳೆಯ ಬಳಕೆ, ಉಪಯೋಗಗಳನ್ನು ಮನಗಂಡು ಆ ಪ್ರಕಾರ ಅದರ ಮೌಲ್ಯವನ್ನು ಕಂಡುಕೊಂಡಿದ್ದಾರೆ.

ಉತ್ತಮ ಯೋಜನೆ ಹಾಗೂ ಪರಿಶ್ರಮದ ನಿರ್ವಹಣೆಯಿಂದ ಸಣ್ಣ ಹಿಡುವಳಿಯಲ್ಲೂ ಸ್ವಾವಲಂಬಿ ಕೃಷಿ ಬದುಕು ಸಾಧ್ಯ ಎಂಬುದನ್ನು ಬೆಂಗಳಿ ಕುಟುಂಬದ ಸದಸ್ಯರು ತೋರಿಸಿಕೊಟ್ಟಿದ್ದಾರೆ. ತೆಂಗಿನ ಮರ ಏರುವುದೂ ಸೇರಿದಂತೆ ಎಲ್ಲಾ ಕೃಷಿ ಕೆಲಸಗಳನ್ನೂ ಅಗತ್ಯಬಿದ್ದರೆ ತಾವೇ ಮಾಡಲು ಸಿದ್ಧರಿರುವುದರಿಂದ ಕೃಷಿಗೆ ಸಹಾಯಕರ ಅವಲಂಬನೆಯೂ ಕಡಿಮೆ. ಬೆಂಗಳಿ ಕುಟುಂಬದ ಮೌಲ್ಯವರ್ಧನೆಯ ಪ್ರಯತ್ನಗಳೂ ಸುಸ್ಥಿರತೆಯೆಡೆಗಿನ ಹೊಸ ಹಾದಿಗಳ ಹುಡುಕಾಟದ ಫಲ. ಕೃಷಿ ಹಾಗೂ ಮೌಲ್ಯವರ್ಧಿತ ಉತ್ಪನ್ನಗಳ ಗುಣಮಟ್ಟವನ್ನು ಕಾಯ್ದುಕೊಂಡುದರಿಂದ ಮಾರುಕಟ್ಟೆಯೂ ಕಷ್ಟವೆನಿಸಿಲ್ಲ.
ಕೃಷಿಗೀಗ ಇಳಿಗಾಲ, ಕೃಷಿಕರಿಗೆ ಭವಿಷ್ಯವಿಲ್ಲ ಎಂಬ ಭಾವನೆ ದಟ್ಟವಾಗುತ್ತಿರುವ ಸದ್ಯದ ಸಂದರ್ಭದಲ್ಲಿ ಬೆಂಗಳಿ ಕುಟುಂಬ ಸಾಗುತ್ತಿರುವಂತಹ ಸ್ವಾವಲಂಬನೆಯ ಕಾಲುದಾರಿಗಳ ಮೂಲಕ ಸುಸ್ಥಿರತೆಯ ಹೆದ್ದಾರಿ ಕಟ್ಟಬೇಕಾಗಿದೆ. ಬೆಂಗಳಿ ಕುಟುಂಬದ ಕೃಷಿ ಪ್ರಯತ್ನಗಳನ್ನು ಕಾಮ್ ಫೆಲೋ ಡಾ. ಗಣೇಶ ಎಂ. ನೀಲೇಸರ ಅವರು ವಿಸ್ತೃತವಾಗಿ ದಾಖಲಿಸಿದ್ದಾರೆ.

ಪ್ರಕಾಶನ: ಕೃಷಿ ಮಾಧ್ಯಮ ಕೇಂದ್ರ
327, 1ನೇ ಮಹಡಿ
ರಾಯಚೂರು ಪ್ಲಾಟ್ಸ್, ನಾರಾಯಣಪುರ, ಧಾರವಾಡ –580 008
agriculturalmedia@gmail.com
www.krushimadhyama.org



### ಅನ್ನದಾತನ ಅಂಗಳದಲ್ಲಿ
ಲೇ: ಈರಯ್ಯ ಕಿಲ್ಲೇದಾರ
ಬೆಲೆ: ರೂ.100

ಕೃಷಿರಂಗ ಹಾಗೂ ಅದಕ್ಕೆ ಸಂಬಂಧಿಸಿದ ವಿದ್ಯಮಾನಗಳಿಗೆ ತಮ್ಮ ಅನುಭವಗಳ ಆಧಾರದಲ್ಲಿ ಪ್ರತಿಕ್ರಿಯಿಸುವ ಕೃಷಿಕ, ಬರಹಗಾರ ಈರಯ್ಯ ಕಿಲ್ಲೇದಾರ ಅವರ ಲೇಖನಗಳ ಸಂಗ್ರಹ. ಅವರ ಬರವಣಿಗೆಯನ್ನು ವಿಶ್ಲೇಷಿಸುತ್ತಾ ಹಿರಿಯ ಬರಹಗಾರ ಅಡ್ಡೂರು ಕೃಷ್ಣರಾವ್, ಪುಸ್ತಕದ ಮುನ್ನುಡಿಯಲ್ಲಿ ಕಿಲ್ಲೇದಾರ ಅವರ ನುಡಿಗಟ್ಟುಗಳ ಸಮರ್ಥ ಬಳಕೆಯನ್ನು ವಿಶೇಷವಾಗಿ ಉಲ್ಲೇಖಿಸಿದ್ದಾರೆ.

ಪ್ರಕಾಶನ: ಕಾಲ ಪ್ರಕಾಶನ, ಸಂಖ್ಯೆ: 23/ಎ, 2ನೇ ಮಹಡಿ, 10ನೇ ಅಡ್ಡರಸ್ತೆ, 1ನೇ 'ಎನ್' ಬ್ಲಾಕ್, ರಾಜಾಜಿನಗರ, ಬೆಂಗಳೂರು–560 010
080 – 23426778



### ಡೇರಿ ಡಾಕ್ಟರ್ ಹೋರಿ ಮಾಸ್ಟರ್
ಲೇ: ಡಾ. ಗಣೇಶ ಎಂ. ನೀಲೇಸರ
ಬೆಲೆ: ರೂ.120

ಕಳೆದ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಜೀವಿಸಿದ್ದ ಪಶುವೈದ್ಯ ಜೇಮ್ಸ್ ಆಲ್ಫ್ರೆಡ್ ವೈಟ್ ತಮ್ಮ ವೃತ್ತಿ ಜೀವನದ ಅನುಭವಗಳನ್ನು ದಾಖಲಿಸಿದ್ದರು. ಜೇಮ್ಸ್ ಹೇರಿಯಟ್ ಎಂಬ ಕಾವ್ಯನಾಮದಲ್ಲಿ ಪ್ರಕಟಿಸಿದ್ದ ಜನಪ್ರಿಯ ಪುಸ್ತಕದ ('All Creatures great and small') ಆಯ್ದ ಕಥನಗಳ ಕನ್ನಡರೂಪ. ಸ್ವತಃ ಪಶುವೈದ್ಯರಾಗಿರುವ ಡಾ. ಗಣೇಶ ಎಂ. ನೀಲೇಸರ ಸಮರ್ಥವಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಪಶುವೈದ್ಯ ವೃತ್ತಿಯ ಒಳನೋಟಗಳು, ನೋವು ನಲಿವುಗಳು, ಹಾಸ್ಯಮಯ ಪ್ರಸಂಗಗಳನ್ನು ಈ ಪುಸ್ತಕ ನವಿರಾಗಿ ತೆರೆದಿಡುತ್ತದೆ.

ಪ್ರಕಾಶನ: ಭೂಮಿ ಬುಕ್ಸ್, 150, ಮೊದಲ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು–560 020
ದೂರವಾಣಿ: 08023565885, 9449177628
ಈಮೇಲ್: bhoomi.books@gmail.com



### ಜೀವನದಿಗಳ ಸಾವಿನ ಕಥನ
ಲೇ: ಡಾ. ಎನ್. ಜಗದೀಶ್ ಕೊಪ್ಪ
ಬೆಲೆ: ರೂ.100

ಜಗತ್ತಿನ ಜೀವನದಿಗಳನ್ನು ಅಣೆಕಟ್ಟುಗಳ ಹೆಸರಿನಲ್ಲಿ ಕೊಂದು ಹಾಕುತ್ತಿರುವ ನೋವಿನ ಕಥನವೇ 'ಜೀವನದಿಗಳ ಸಾವಿನ ಕಥನ'. ಅಧ್ಯಯನದ ಗಟ್ಟಿನೆಲೆಯಲ್ಲಿ ರಚಿತವಾಗಿರುವ, ಆಳ ಒಳನೋಟಗಳಿರುವ ಈ ಪುಸ್ತಕ ನೀರನ್ನಾವರಿಸಿರುವ ಹಲವು ಗಂಭೀರ ಸಮಸ್ಯೆಗಳ ಕುರಿತು ಬೆಳಕು ಚೆಲ್ಲುತ್ತದೆ.

ಪ್ರಕಾಶನ: ಪಲ್ಲವ ಪ್ರಕಾಶನ, ಚನ್ನಪಟ್ಟಣ
ವಯಾ: ಎಮ್ಮಿಗನೂರು, ಬಳ್ಳಾರಿ–583 113
ದೂರವಾಣಿ: 9480353507



### ಕಾಫಿ ಬೈಟ್
ಲೇ: ಅಚ್ಚನಹಳ್ಳಿ ಸುಚೇತನ
ಬೆಲೆ: ರೂ.100

ಈ ಪುಸ್ತಕ ಕಾಫಿ ಬೆಳೆ–ಉದ್ದಿಮೆಯ ವಿವಿಧ ಹಂತದ ಮಾಹಿತಿಯನ್ನೊಳಗೊಂಡಿದೆ. ಕಾಫಿಯ ಜೊತೆ ಬೆಳೆದಿರುವ ಸಂಸ್ಕೃತಿ, ಅದರ ವಿವಿಧ ಆಯಾಮಗಳನ್ನು ಸರಳವಾಗಿ ನಿರೂಪಿಸಿದ್ದಾರೆ.

ಪ್ರಕಾಶನ: ಡ್ರಾಪ್ ಬೈ ಡ್ರಾಪ್, ಅಚ್ಚನಹಳ್ಳಿ, ಅಂಚೆ: ದೇವಲಕೆರೆ
ಸಕಲೇಶಪುರ ತಾಲೂಕು, ಹಾಸನ ಜಿಲ್ಲೆ–577 119
ದೂರವಾಣಿ–9448530176



## ಕಳಚಿದ ಭ್ರಮೆಗಳು: ಸದಾ ನೆನಪಿನಲ್ಲಿರಬೇಕಾದ ವಾಕ್ಯಗಳು

– ಎನ್.ಎಂ. ನಟರಾಜ

ಜನವರಿ 13, 2013ರಂದು ಬೆಂಗಳೂರಿನ ಪಶುವೈದ್ಯಕೀಯ ಕಾಲೇಜಿನಲ್ಲಿ ನಡೆದ ಒಂದು ದಿನದ ಪುನರ್ಮನನ ಶಿಬಿರದಲ್ಲಿ ಕೃಷಿ ಮಾಧ್ಯಮ ಕೇಂದ್ರದ ತರಬೇತಿಯ ನಂತರವೂ ಬರವಣಿಗೆ ಕುರಿತಂತೆ ಉಳಿದುಕೊಂಡಿದ್ದ ಭ್ರಮೆಗಳು ಕಳಚಿದವು. 'ಕಲಿಕೆ ನಿರಂತರ' ಎಂಬ ಆಶಯದೊಂದಿಗೆ ಪ್ರಾರಂಭವಾದ ಈ ಶಿಬಿರ ಕಾಮ್ ಫೆಲೋಗಳ ಹಲವು ಅನುಮಾನಗಳು, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಸಹಕಾರಿಯಾಯಿತು.



ಬೆಳಗಾವಿ ಜಿಲ್ಲೆಯಲ್ಲಿ ಶಿಕ್ಷಕರಾಗಿರುವ ವಿನೋದ ಪಾಟೀಲ ಅವರಿಗೆ ಕನ್ನಡ ವಾಕ್ಯಗಳಲ್ಲಿ ಮರಾಠಿ ಶಬ್ದಗಳಿರುವ ಮಾತುಗಳನ್ನು ಉದ್ಧರಿಸುವುದು ಹೇಗೆ ಎಂಬ ಸಮಸ್ಯೆ. ಇನ್ನೂ ಕೆಲವರಿಗೆ ತಮ್ಮ ಪ್ರಕಟಿತ ಲೇಖನಗಳ ಕುರಿತು ಸಂಪನ್ಮೂಲ ವ್ಯಕ್ತಿಗಳ ಅಭಿಪ್ರಾಯ ತಿಳಿಯುವ ಬಯಕೆ. ಒಂದು ವಸ್ತುವಿನ ವಿವಿಧ ಕೋನಗಳನ್ನು ಗ್ರಹಿಸುವಲ್ಲಿ ಬರಹಗಾರರು ಎದುರಿಸುವ ಸಮಸ್ಯೆಗಳು; ವಸ್ತುವಿನ ಆಶಯವನ್ನು ಬರವಣಿಗೆಯಲ್ಲಿ ತರಲು ಎದುರಾಗುವ ಅಡ್ಡಿಗಳು; ಲೇಖನ ಪ್ರಕಟವಾಗದಿದ್ದಾಗ ಯಾವ ರೀತಿ ಮುಂದುವರಿಯಬೇಕು; ಬರವಣಿಗೆಯ ಪೂರ್ವ ತಯಾರಿ–ಕ್ಷೇತ್ರಭೇಟಿಯ ಮಹತ್ವ–ಬರವಣಿಗೆಯ ಸಂಯಮ ಹೀಗೆ ಕೃಷಿ–ಗ್ರಾಮೀಣ ಬರವಣಿಗೆಯ ವಿವಿಧ ಮಗ್ಗುಲುಗಳು ದಿನದ ಚರ್ಚೆಯಲ್ಲಿ ಮೂಡಿಬಂದವು. ಕೃಷಿ–ಗ್ರಾಮೀಣಾಭಿವೃದ್ಧಿ ಸಂಬಂಧಿ ಬರಹಗಳು ಕೃಷಿ ಪುರವಣಿಗಳ ಜೊತೆಗೆ ಇತರ ಪುಟಗಳಲ್ಲೂ ಪ್ರಕಟವಾಗಬೇಕಾದ ಅಗತ್ಯವನ್ನು ಒತ್ತಿಹೇಳಿದ ಸಂಪನ್ಮೂಲ ವ್ಯಕ್ತಿಗಳು ಈ ನಿಟ್ಟಿನಲ್ಲಿ ಕೆಲ ಸಲಹೆಗಳನ್ನೂ ನೀಡಿದರು.

ಶಿಬಿರದಲ್ಲಿ ಹೇಳಿದ ಕೆಲವು ವಾಕ್ಯಗಳನ್ನು ಇಲ್ಲಿ ನೆನಪು ಮಾಡಿಕೊಳ್ಳಲೇಬೇಕು. ಯಾಕೆಂದರೆ ಈ ವಾಕ್ಯಗಳನ್ನು ಮರೆತರೆ ನಮ್ಮ ಬರಹಗಳ ಉಪಯುಕ್ತತೆ ಕುರಿತ ಗೊಂದಲಗಳು ಬರಹಗಾರರು ಹಾಗೂ ಓದುಗರನ್ನು ಮತ್ತೆ ಮತ್ತೆ ಕಾಡಬಹುದು.

- ಕಾವ್ ಫೆಲೋಗಳು ಲೇಖನಗಳನ್ನು ಬರೆಯುವ ಕಾರ್ಖಾನೆಗಳಾಗಬಾರದು.
- ನಾವು ಯಾಕೆ, ಯಾರಿಗಾಗಿ ಬರೆಯುತ್ತಿದ್ದೇವೆ ಎನ್ನುವ ಎಚ್ಚರ ಇರಬೇಕು.
- ನಮ್ಮ ಸುತ್ತಲಿನ ಬೆಳವಣಿಗೆಯ ಕುರಿತು ಸದಾ ಎಚ್ಚರದ ಕಣ್ಣು ಇರಬೇಕು.
- ಲೇಖನಗಳಲ್ಲಿ ಮಾಹಿತಿಯ ಮಾನವೀಯ ದೃಷ್ಟಿಕೋನವನ್ನೂ ತೆರೆದಿಡುವಂತಾದರೆ ಬರಹ ಹೆಚ್ಚು ಮಹತ್ವ ಪಡೆಯುತ್ತದೆ, ಬಹಳ ಕಾಲ ಓದುಗರ ಓದುಗರ ಮನದಲ್ಲಿಯೂ ಉಳಿಯುತ್ತದೆ.
- ಬರಹಗಾರರು ನೀಡುವ ವಿವರಗಳು ವಸ್ತುವಿನ ಪೂರ್ಣ ಚಿತ್ರಣವನ್ನು ಓದುಗರಲ್ಲಿ ಮೂಡಿಸಬೇಕು.
- ಬರವಣಿಗೆಯೆಂದರೆ ಭಾಷೆಯ ಬೆಳವಣಿಗೆ ಹಾಗೂ ಕೃಷಿ, ಗ್ರಾಮೀಣ ವಿಚಾರಗಳ ಕುರಿತ ಚಿಂತನೆಯೂ ಹೌದು.
- ಕೃಷಿ ಬರಹಗಳು ಕೃಷಿ ಪುರವಣಿಗಷ್ಟೇ ಸೀಮಿತವಾಗದೆ ಇತರ ಪುರವಣಿಗಳಲ್ಲೂ ಪ್ರಕಟವಾದರೆ ಅದು ಬೇರೆ ಬೇರೆ ಆಸಕ್ತಿಯ ಜನರನ್ನು ತಲುಪುತ್ತದೆ.



ದಿನಪತ್ರಿಕೆಗಳ ಕೃಷಿಪುಟಗಳ ಸಂಪಾದಕರೊಂದಿಗಿನ ಸಂವಾದ ವಿಚಾರ ವಿನಿಮಯದೊಂದಿಗೆ ಬರಹಗಾರರು ಹಾಗೂ ಪತ್ರಿಕೆಗಳ ನಡುವಿನ ಬಾಂಧವ್ಯ ಗಟ್ಟಿಗೊಳಿಸುವಲ್ಲಿಯೂ ಸಹಕಾರಿಯಾಯಿತು. ಪ್ರಜಾವಾಣಿ, ವಿಜಯವಾಣಿ, ಸಂಯುಕ್ತ ಕರ್ನಾಟಕ ಹಾಗೂ ಹೊಸ ದಿಗಂತ ಪತ್ರಿಕೆಯ ಪ್ರತಿನಿಧಿಗಳು ಸಂವಾದದಲ್ಲಿ ಪಾಲ್ಗೊಂಡು ತಮ್ಮ ತಮ್ಮ ಪತ್ರಿಕೆಯ ಆದ್ಯತೆಗಳು, ಲೇಖನಗಳ ಕುರಿತ ನಿರೀಕ್ಷೆ ಹೀಗೆ ಲೇಖನ ಪ್ರಕಟಣೆಗೆ ಸಂಬಂಧಿಸಿ ಹಲವು ಉಪಯುಕ್ತ ಮಾಹಿತಿಗಳನ್ನು ನೀಡಿ ಪ್ರೋತ್ಸಾಹಿಸಿದರು.

ಕನಿಷ್ಠ ಒಂದು ವರ್ಷದಲ್ಲಿ ಒಮ್ಮೆಯಾದರೂ ಒಂದು ದಿನದ ಇಂತಹ ಶಿಬಿರಗಳಲ್ಲಿ ಭಾಗವಹಿಸುವುದರಿಂದ ನಮ್ಮ ಬರವಣಿಗೆಯಲ್ಲಿ ವೇಗ ವೃದ್ಧಿಯಾಗುತ್ತದೆ. ದಿನ ನಿತ್ಯದ ನಮ್ಮ ಜಂಜಾಟಗಳ ನಡುವೆ ಬರವಣಿಗೆ ಕ್ರಮಗಳ ಕುರಿತಂತೆ ಮರೆತು ಹೋದ ಅದೆಷ್ಟೋ ಸಂಗತಿಗಳು ಪುನರ್ಮನನವಾಗುತ್ತವೆ.

ನಾಗಸಂದ್ರ
ಕೊಡಿಗೇಹಳ್ಳಿ (ಅಂ), ದೊಡ್ಡಬಳ್ಳಾಪುರ–561203
ಮೊಬೈಲ್: 9342267302



### ಕನ್ನಡ ದಿನಪತ್ರಿಕೆಗಳಲ್ಲಿ ಕೃಷಿಸುದ್ದಿ
ಲೇ: ಡಾ. ಸುರೇಶ್ ಕುಮಾರ್
ಬೆಲೆ: ರೂ. 150

ಸುರೇಶ ಕುಮಾರ್ ಅವರು ಕನ್ನಡದ ದಿನಪತ್ರಿಕೆಗಳಲ್ಲಿ ಬರುವ ಕೃಷಿ ಸಂಬಂಧಿ ಸುದ್ದಿ, ಲೇಖನಗಳ ಕುರಿತು ಅಧ್ಯಯನ ಮಾಡಿ ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ. ಅಭಿವೃದ್ಧಿ ಸಂವಹನ, ಭಾರತೀಯ ಕೃಷಿ–ಒಂದು ಅವಲೋಕನ, ಕರ್ನಾಟಕದಲ್ಲಿ ಕೃಷಿ, ವಿದ್ಯುನ್ಮಾನ ಮಾಧ್ಯಮಗಳಲ್ಲಿ ಕೃಷಿ, ಕನ್ನಡದಲ್ಲಿ ಕೃಷಿ ಪತ್ರಿಕೋದ್ಯಮದ ಸ್ವರೂಪ ಮತ್ತು ಬೆಳವಣಿಗೆ ಮುಂತಾದ ಹದಿನೈದು ಅಧ್ಯಾಯಗಳು ಈ ಪುಸ್ತಕದಲ್ಲಿದೆ.

ಪ್ರಕಾಶನ:
ಸಂಖ್ಯೆ: 240, ಬನಶಂಕರಿ ನಿಲಯ, ಏಳನೇ ಅಡ್ಡರಸ್ತೆ, ಡಿವೈನ್ ಅಕ್ವೇರಿಯಂ ಹಿಂಭಾಗ, ರಾಘವೇಂದ್ರ ನಗರ, ಮೈಸೂರು – 570 011